20 December 2025 Saturday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಕೇಳಿ ಕೊಡುವ ನೂರಾರು ಬಹುಮಾನಕ್ಕಿಂತ, ಕೇಳದೇ ಕೊಡುವ ಗೌರವವೇ ಹೆಚ್ಚು!

ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಮಿತಿ ಇಲ್ಲದೆ ಮೆರೆದವರನ್ನು ಗತಿ ಇಲ್ಲದೇ ಇರುವ ತರಹ ಮಾಡುವುದೇ ಕರ್ಮ

ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 58 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಕೈ ಹೈಕಮಾಂಡ್ ನನ್ನ ಪರ!

## ರಾಜಕೀಯ ನಿಶ್ಯಕ್ತಿ ಇಲ್ವೇ ಇಲ್ಲ: ಸಿದ್ದರಾಮಯ್ಯ ತಿರುಗೇಟು

**ಬೆಳಗಾವಿ:** ನಾನು ಇದುವರೆಗೆ ಎಲ್ಲಿಯೂ ಎರಡೂವರೆ ವರ್ಷಕ್ಕೆ ಸಿಎಂ ಎಂದು ಹೇಳಿಲ್ಲ. ಕಾಂಗ್ರೆಸ್ ಹೈಕಮಾಂಡ್ ನನ್ನ ಪರವಾಗಿದೆ. ಹೀಗಾಗಿ ನಾನು ಈಗಲೂ ಸಿಎಂ ಆಗಿದ್ದೇನೆ. ಸಿಎಂ ಮುಂದೆಯೂ ಮುಂದುವರಿಯುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸದನದಲ್ಲಿ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು. ಈ ಮೂಲಕ ಸ್ವಪಕ್ಷದ ವಿರೋಧಿ ಬಣಕ್ಕೂ ಬಿಸಿ ಮುಟ್ಟಿಸಿದ್ದಾರೆ.

ಚಳಿಗಾಲದ ಅಧಿವೇಶನದಲ್ಲಿ ಶುಕ್ರವಾರ ಸಿದ್ದರಾಮಯ್ಯ ಅವರ ಕಾಲೆಳೆದ ವಿಪಕ್ಷ ನಾಯಕ ಆರ್.ಅಶೋಕ್ ಅವರು, ಕಳೆದ 4 ದಿನಗಳಿಂದ ಬಳಲಿದೀರಿ. ನಾವು ರಾಜಕೀಯ ನಿಶ್ಯಕ್ತಿ ಬಂದಿದೆ ಅನ್ಕೊಂಡಿದ್ವಿ. ನಿಮಗೆ ರಾಜಕೀಯ ಶಕ್ತಿ ಬಂದಿದೆಯಾ? ಎಂದು ಲೇವಡಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ನನಗೆ ರಾಜಕೀಯ ನಿಶ್ಯಕ್ತಿ ಇಲ್ವೇ ಇಲ್ಲ. ಅಂಥ ಅವಕಾಶ ಸೃಷ್ಟಿಯಾಗೋದಿಲ್ಲ. ರಾಜಕೀಯವನ್ನು ಅಷ್ಟೊಂದು ತಲೆ ಕೆಡಿಸಿಕೊಂಡು ಮಾಡೋ ಅಗತ್ಯವೂ ಇಲ್ಲ ಎಂದು ತಿರುಗೇಟು ನೀಡಿದರು.

ಸಿಎಂ ಕುರ್ಚಿ ಕದನಕ್ಕೆ ಸ್ಪಷ್ಟ ಸಂದೇಶ ನೀಡಿದ ಸಿದ್ದರಾಮಯ್ಯ ಅವರು, ನಾನು ಎರಡೂವರೆ ವರ್ಷ ಸಿಎಂ ಆಗಿರ್ತೀನಿ ಅಂಥ ಎಲ್ಲಿಯೂ ಹೇಳಿಲ್ಲ. ಅಲ್ಲದೆ, ಈ ಬಗ್ಗೆ ಯಾವುದೇ ತೀರ್ಮಾನ ಆಗಿಲ್ಲ ಎನ್ನುವ ಮೂಲಕ ನಾನೇ 5 ವರ್ಷ ಸಿಎಂ ಎಂದು ಪುನರುಚ್ಚರಿಸಿದರು.

ವಿಧಾನಸಭೆಯಲ್ಲಿ ಉತ್ತರ ಕರ್ನಾಟಕದ ಚರ್ಚೆಗೆ



ಉತ್ತರ ಕೊಡುವ ವೇಳೆ, ಬಿಜೆಪಿ ಸದಸ್ಯರ ಕಾಲೆಳೆಯುವ ಮಾತುಗಳನ್ನೇ ಮೆಟ್ಟಿಲುಗಳನ್ನಾಡಿ ಮಾಡಿಕೊಂಡ ಸಿಎಂ, ಪಕ್ಷದೊಳಗಿನ ವಿರೋಧಿಗಳಿಗೂ ತಿರುಗೇಟು ನೀಡಿದರು. ಶಾಸಕರು 5 ವರ್ಷಕ್ಕೆ ಸಿಎಂ ಆಯ್ಕೆ ಮಾಡಿದ್ದಾರೆ. ನಾನು ಐದು ವರ್ಷಕ್ಕೆ ಸಿಎಂ ಆಗಿ ಆಯ್ಕೆ ಆಗಿದ್ದೇನೆ ಎಂದು ವಿಪಕ್ಷ ನಾಯಕ ಅಶೋಕ್‌ಗೆ ತಿರುಗೇಟು ನೀಡಿದರು.

ಈಗ ನಾನೇ ಮುಖ್ಯಮಂತ್ರಿ, ಮುಂದೆಯೂ ನಾನೇ ಇರ್ತೀನಿ. ಈಗ ನಾನು ಸಿಎಂ ಆಗಿದ್ದೇನೆ, ನನ್ನ ಪ್ರಕಾರ ಹೈಕಮಾಂಡ್ ನನ್ನ ಪರವೇ ಇದೆ. ಹೈಕಮಾಂಡ್ ಹೇಳೋವರೆಗೂ ನಾನೇ ಮುಖ್ಯಮಂತ್ರಿ.

ಪುಟ 2ಕ್ಕೆ

### ಸಿದ್ದು-ಯತ್ನಾಳ್ ಜುಗಲ್ ಬಂದಿ!

ಸದನದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಕಾಲೆಳೆದ ಯತ್ನಾಳ್, ನೀವೇ ಐದು ವರ್ಷ ಪೂರ್ತಿ ಮಾಡ್ತೀರೋ? ಅಥವಾ ಇವತ್ತೇ ಧನ್ಯವಾದ, ವಿದಾಯ ಭಾಷಣ ಮಾಡ್ತೀರೋ? ಎಲ್ಲರಿಗೂ ಧನ್ಯವಾದ ಹೇಳ್ತೀರೋದು ನೋಡ್ತಿದ್ರೆ ನಮಗೆ ಸಂಶಯ ಬರುತ್ತಿದೆ ಎಂದು ಕಿಚಾಯಿಸಿದರು. ಯತ್ನಾಳ್‌ಗೆ ಏನೇನೋ ಸಂಶಯಗಳಿವೆ. ಅವರ ಪಕ್ಷದಿಂದ ಅದಕ್ಕೇ ಯತ್ನಾಳ್‌ಗೆ ತೆಗೆದುಹಾಕಿಬಿಟ್ಟರು ಎಂದು ಸಿಎಂ ಹೇಳಿದರು. ಅದಕ್ಕೆ ಯತ್ನಾಳ್ ನನಗೂ ಹೊರ ಹಾಕಿದ್ದಾರೆ. ನಿಮಗೂ ಹೊರ ಹಾಕಿದ್ದಾರೆ. ಹೊರ ಹಾಕಿದವರಿಗೆ ಅನ್ಯಾಯ ಆಗಲ್ಲ, ನಿಮ್ಮನ್ನು ಕುತಂತ್ರದಿಂದ ಹೊರ ಹಾಕಿದರು. ಈಗ ಸಿಎಂ ಆಗಲಿಲ್ವಾ, ರಾಜಕೀಯದಲ್ಲಿ ಅದು ಸಾಮಾನ್ಯ ಎಂದರು. ನಾನು ಅನ್ಯಾಯ ಆಯ್ತು ಅಂತ ಹೇಳಲ್ಲ. ಪಕ್ಷದಿಂದ ಹೊರ ಹಾಕಿದ್ದು ಸತ್ಯ ಅಲ್ಲ. ರಾಜಕೀಯದಲ್ಲಿ ಅವೆಲ್ಲಾ ಇರ್ತಾವೆ, ಆದರೆ ಸಂಶಯ ಇಟ್ಕೋಬೇಡಿ ಎಂದು ಸಿದ್ದರಾಮಯ್ಯ ಹೇಳಿದರು. ಈಗ ಕ್ಲಿಯರ್ ಆಯ್ತು, ಸಿಎಂ ಸಿದ್ದರಾಮಯ್ಯ ಐದು ವರ್ಷ ಪೂರ್ತಿ ಮುಗಿಸ್ತಾರೆ ಅಂತ ಸಂದೇಶ ಕೊಟ್ಟಂತಾಯ್ತು ಎಂದು ಯತ್ನಾಳ್ ಮತ್ತೆ

## ದ್ವೇಷ ಭಾಷಣಕ್ಕೆ ತಡೆ: ಪರಿಷತ್ ನಲ್ಲೂ ಪಾಸ್

**ಬೆಳಗಾವಿ:** ರಾಜ್ಯದಲ್ಲಿ ದ್ವೇಷಭಾಷಣಗಳಿಗೆ ಕಡಿವಾಣ ಹಾಕುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕವನ್ನು ಪ್ರತಿಪಕ್ಷಗಳ ತೀವ್ರ ಪ್ರತಿಭಟನೆ ನಡುವೆ ಶುಕ್ರವಾರ ವಿಧಾನಪರಿಷತ್ತಿನಲ್ಲಿಯೂ ಅಂಗೀಕರಿಸಲಾಯಿತು.

ವಿರೋಧ ಪಕ್ಷಗಳು ಇದನ್ನು 'ಭಾಷಣ ಸ್ವಾತಂತ್ರ್ಯದ ಮೇಲೆ ನೇರ ದಾಳಿ, ರಾಜಕೀಯ ದ್ವೇಷಗಳಿಗೆ ಅಪಾಯಕಾರಿ ಅಸ್ತ್ರ ಎಂದು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದವು. ಗೃಹ ಸಚಿವ ಡಾ.ಜಿ.ಪರಮೇಶ್ವರ್, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ(ಪ್ರತಿಬಂಧಕ) ವಿಧೇಯಕ- 2025 ಅನ್ನು ಮಂಡಿಸಿದರು. ಗುರುವಾರ ವಿಧಾನಸಭೆಯಲ್ಲಿ ಈ ವಿಧೇಯಕವನ್ನು ಅಂಗೀಕರಿಸಲಾಗಿತ್ತು.

## ದಸರಾ ವಸ್ತುಪ್ರದರ್ಶನ ಜ. 5ರವರೆಗೆ ವಿಸ್ತರಣೆ

**ಮೈಸೂರು:** ದಸರಾ ಅಂಗವಾಗಿ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಿರುವ ದಸರಾ ವಸ್ತು ಪ್ರದರ್ಶನವನ್ನು ಜ.5ರವರೆಗೆ ವಿಸ್ತರಿಸಲಾಗಿದೆ ವಸ್ತುಪ್ರದರ್ಶನ ಡಿ.20ರಂದು ಮುಗಿಯಬೇಕಾಗಿತ್ತು. ಸಾರ್ವಜನಿಕರು ಹಾಗೂ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದರಿಂದಾಗಿ ಮತ್ತು ಹೊಸ ವರ್ಷದ ಅಂಗವಾಗಿ ಮತ್ತಷ್ಟು ದಿನಗಳವರೆಗೆ ಮುಂದುವರಿಸಲಾಗಿದೆ. ಗುತ್ತಿಗೆದಾರರ ಕೋರಿಕೆ ಮೇರೆಗೆ ವಸ್ತುಪ್ರದರ್ಶನವನ್ನು ಜ.5ರವರೆಗೆ ಒಟ್ಟು 16 ದಿನಗಳ ಕಾಲ ಮುಂದುವರಿಸಲಾಗಿದೆ ಎಂದು ಸಿಇಒ ರುದ್ರೇಶ್ ತಿಳಿಸಿದ್ದಾರೆ.

## ನನ್ನ-ಸಿದ್ದು ನಡುವೆ ಒಪ್ಪಂದ



**ಕಾರವಾರ:** ನನ್ನ ಮತ್ತು ಸಿದ್ದರಾಮಯ್ಯ ನಡುವೆ ಒಪ್ಪಂದ ಆಗಿದೆ. ಇಬ್ಬರೂ ಸೇರಿ ಹೈಕಮಾಂಡ್ ಅನ್ನು ಒಪ್ಪಿಸಿದ್ದೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅಂಕೋಲಾದ ಆಂದ್ಲೆ ಗ್ರಾಮದ ಜಗದೀಶ್ವರಿ ಅಮ್ಮನವರ ದೇವಸ್ಥಾನಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಹೈಕಮಾಂಡ್ ಸೂಚನೆಯಂತೆ ನಾವಿಬ್ಬರೂ ಮಾತುಕತೆ ನಡೆಸಿ ಒಟ್ಟಾಗಿ ಸಾಗುತ್ತೇವೆ ಎಂದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಐದು ವರ್ಷದ ಅವಧಿ ಪೂರ್ಣಗೊಳಿಸುವುದಿಲ್ಲ ಎಂದು ನಾನೆಂದೂ ಹೇಳಿಲ್ಲ. ಹೈಕಮಾಂಡ್ ಅವರ ಪರವಾಗಿದ್ದ ಕಾರಣಕ್ಕೆ ಅವರು ಮುಖ್ಯಮಂತ್ರಿ ಆಗಿದ್ದಾರೆ ಎಂದು ಹೇಳಿದರು.

## ಡಿಕೆಶಿಗೆ ಜಗದೀಶ್ವರಿ ಪ್ರಸಾದ



**ಕಾರವಾರ:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಂಕೋಲಾ ತಾಲ್ಲೂಕಿನ ಆಂದ್ಲೆ ಗ್ರಾಮದ ಶಕ್ತಿ ದೇವತೆ ಜಗದೀಶ್ವರಿ ಅಮ್ಮನವರ ದೇವಸ್ಥಾನಕ್ಕೆ ಶುಕ್ರವಾರವೂ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಡಿ.ಕೆ.ಶಿವಕುಮಾರ್ ಅವರಿಗೆ ದೇವಿ ಬಲಗಡೆ ಪ್ರಸಾದ ನೀಡಿರುವುದಾಗಿ ಅರ್ಚಕರು ತಿಳಿಸಿದ್ದಾರೆ. ತಮ್ಮ ಇಷ್ಟಾರ್ಥಗಳ ಬಗ್ಗೆ ದೇವರ ಎದುರು ನಿಂತು ಪ್ರಶ್ನೆ ಹಾಕುವುದು ವಾಡಿಕೆ. ಡಿ.ಕೆ.ಶಿವಕುಮಾರ್ ಕೂಡ ಇಷ್ಟಾರ್ಥ ಸಿದ್ಧಿಗೆ ಪ್ರಶ್ನೆ ಹಾಕಲು ಬಂದಿದ್ದರು ಎನ್ನಲಾಗಿದೆ.

ಐದು ವರ್ಷಗಳ ಹಿಂದೆ ಆಂದ್ಲೆ ಜಗದೀಶ್ವರಿ ಅಮ್ಮನವರ ದೇವಸ್ಥಾನಕ್ಕೆ ಭೇಟಿ ನೀಡಿ, ಇಷ್ಟಾರ್ಥಕ್ಕೆ ಪ್ರಾರ್ಥಿಸಿದ್ದೆ. ಪ್ರಾರ್ಥನೆ ಫಲಿಸಿತ್ತು. ಮತ್ತೆ ಇಲ್ಲಿಗೆ ಬಂದಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಡಿಕೆಶಿ ಜೊತೆ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ಸತೀಶ ಸೈಲ್ ಇದ್ದರು. ಆದರೆ, ಅವರೆಲ್ಲರನ್ನೂ ಹೊರಗೆ ಬಿಟ್ಟು ಡಿ.ಕೆ.ಶಿವಕುಮಾರ್ ಮಾತ್ರ ಗರ್ಭಗುಡಿ ಪ್ರವೇಶಿಸಿ ಬಾಗಿಲು ಮುಚ್ಚಿ ಪೂಜೆ ಸಲ್ಲಿಸಿದರು.

ಈ ದೇವಾಲಯದಲ್ಲಿ ಪ್ರತಿ ಅಮಾವಾಸ್ಯೆ ದಿನ 6 ವರ್ಷದಿಂದ ಡಿಕೆಶಿ ಹೆಸರಿನಲ್ಲಿ ಪೂಜೆ ಮಾಡಲಾಗುತ್ತಿದೆ. ಡಿಕೆಶಿ ತಮ್ಮ ಪ್ರತಿಯೊಂದು ರಾಜಕೀಯ ನಡೆಗೂ ದೇವಿಯ ಆಶೀರ್ವಾದ ಬೇಡುತ್ತಾರೆ.

2019ರಲ್ಲಿ ಅಕ್ರಮ ಹಣ ಪತ್ತೆ ಕೇಸಲ್ಲಿ 50 ದಿನ ಜೈಲುವಾಸ ಅನುಭವಿಸಿದ್ದ ವೇಳೆ ಡಿಕೆಶಿಯವರ ತಾಯಿ

ಪುಟ 2ಕ್ಕೆ

## ಶಬರಿಮಲೆ ದೇಗುಲ ಚಿನ್ನ ಕಳವು: ಬಳ್ಳಾರಿಯ ಗೋವರ್ಧನ್ ಬಂಧನ



**ತಿರುವನಂತಪುರ:** ಶಬರಿಮಲೆ ಚಿನ್ನ ಕಳ್ಳತನ ಪ್ರಕರಣದಲ್ಲಿ ಸ್ಮಾರ್ಟ್ ಕ್ರಿಯೇಷನ್ಸ್ ಸಿಇಒ ಪಂಕಜ್ ಭಂಡಾರಿ ಮತ್ತು ಬಳ್ಳಾರಿಯಲ್ಲಿ ನೆಲೆಸಿರುವ ಆಭರಣ ವ್ಯಾಪಾರಿ ಗೋವರ್ಧನ್ ಅವರನ್ನು ವಿಶೇಷ ತನಿಖಾ ತಂಡ ಬಂಧಿಸಿದೆ.

ಪಂಕಜ್ ಭಂಡಾರಿ ದ್ವಾರಪಾಲಕ ಮೂರ್ತಿಗಳನ್ನು ಕೆಲಸಕ್ಕಾಗಿ ತೆಗೆದುಕೊಂಡ ಹೋದ ನಂತರ ಅವುಗಳ ತೂಕ ಕಡಿಮೆಯಾಗಿತ್ತು. ಮೂರ್ತಿಯಿಂದ ತೆಗೆದ ಚಿನ್ನವನ್ನು ಗೋವರ್ಧನ್ ಅವರಿಗೆ ಮಾರಾಟ ಮಾಡಿದ್ದಾರೆ ಎಂದು ಎಸ್‌ಐಟಿ ಆರೋಪಿಸಿದೆ.

ಅಕ್ಟೋಬರ್ 28ರಂದು ಎಸ್‌ಐಟಿ ಗೋವರ್ಧನ್ ಅವರ ಆಭರಣ ಅಂಗಡಿಯ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಈ ಹಗರಣದಲ್ಲಿ ತನ್ನ ಪಾತ್ರವಿಲ್ಲ. ಚಿನ್ನದ ಹೊದಿಕೆಯ ಬಾಗಿಲಿಗೆ ದೇಣಿಗೆಯಾಗಿ ಹಣ ನೀಡಿದ್ದೇನೆ ಎಂದು ಅವರು ಹೇಳಿಕೊಂಡಿದ್ದರು.

## ಜೋಷಿ ಮೇಲಿನ ಆರೋಪ ತನಿಖೆ: ಬಳ್ಳಾರಿ ಸಾಹಿತ್ಯ ಸಮ್ಮೇಳನಕ್ಕೆ ತೊಡಕು: ಸಚಿವ ತಂಗಡಗಿ

**ಬೆಳಗಾವಿ:** ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ್ ಜೋಷಿ ಅವರ ಮೇಲಿನ ಭ್ರಷ್ಟಾಚಾರ ಆರೋಪಗಳ ಕುರಿತು ಸಹಕಾರ ಇಲಾಖೆಯಿಂದ ವಿಚಾರಣೆ ನಡೆದಿರುವುದು ಹಾಗೂ ಹೈಕೋರ್ಟ್ ನಲ್ಲಿ ಮೊಕದ್ದಮೆ ದಾಖಲಾಗಿರುವ ಹಿನ್ನೆಲೆಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವ ಸಿದ್ಧತಾ ಕಾರ್ಯಗಳನ್ನು ಕೈಗೊಳ್ಳದಿರುವುದರಿಂದ ಕಸಾಪ ಅಧ್ಯಕ್ಷರು ಈ ಹಿಂದೆ ಘೋಷಣೆ ಮಾಡಿದಂತೆ 2025ರ ಡಿಸೆಂಬರ್ ತಿಂಗಳಲ್ಲಿ ಸಮ್ಮೇಳನ ನಡೆಸಲು ಸಾಧ್ಯವಾಗಿರುವುದಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದ್ದಾರೆ.



ಶಾಸಕ ಮಧು ಜಿ.ಮಾದೇಗೌಡರ ಪ್ರಶ್ನೆಗೆ ಬೆಳಗಾವಿ ಅಧಿವೇಶನದಲ್ಲಿ ಸಚಿವರು ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.

ಬಳ್ಳಾರಿಯಲ್ಲಿ ನಡೆಸಲು ಉದ್ದೇಶಿಸಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2025-26ನೇ ಸಾಲಿನ ಕ್ರಿಯಾಯೋಜನೆಯಲ್ಲಿ ರೂ. 10 ಕೋಟಿ ಅನುದಾನವನ್ನು ಮೀಸಲಿರಿಸಲಾಗಿದೆ.

ಸಮ್ಮೇಳನ ಸಂಬಂಧ ವಿವಿಧ ಸಮಿತಿಗಳು ರಚನೆಯಾದ ನಂತರ ಸಮಿತಿಗಳು ನೀಡುವ ಒಟ್ಟಾರೆ ಪ್ರಸ್ತಾವನೆ ಮತ್ತು ಅಂದಾಜು ವೆಚ್ಚಗಳನ್ನು ಗಮನಿಸಿ ಬಳ್ಳಾರಿ ಜಿಲ್ಲಾಡಳಿತವು ಸಲ್ಲಿಸುವ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ವಿವರಿಸಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ್ ಜೋಷಿ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಲೇಖಕಿ,

ಪುಟ 2ಕ್ಕೆ

### ವಿಶ್ವ ಕನ್ನಡ ಸಮ್ಮೇಳನ ಇಲ್ಲ

**ಮೂರನೇ ವಿಶ್ವ ಕನ್ನಡ ಸಮ್ಮೇಳನ ನಡೆಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ ಎಂದು ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದ್ದಾರೆ.**


## ಹಾಲಿನ ಸಹಾಯಧನ 7 ರೂ.ಗೆ ಏರಿಕೆ

### ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

**ಬೆಳಗಾವಿ:** ರಾಜ್ಯದ ರೈತರಿಗೆ 1 ಲೀಟರ್ ಹಾಲಿಗೆ ಸಹಾಯಧನವನ್ನು 7 ರೂಪಾಯಿಗೆ ಏರಿಕೆ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.



ಅಧಿವೇಶನದಲ್ಲಿ ಶುಕ್ರವಾರ ಮಾತನಾಡಿದ ಅವರು, ರೈತರಿಗೆ ಹಸುಗಳನ್ನು ಸಾಕಿ ಮೇವು ನೀಡಲು ಹೆಚ್ಚು ಖರ್ಚುಗಳು ಆಗುತ್ತವೆ. ಮೇವು ಸಾಕಾಣಿಕೆಗೆ ರೈತರಿಗೆ ನೆರವಾಗಲು ಮೇವಿನ ಹಿಂಡಿ ದರ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಪ್ರತಿ ಲೀಟರ್ ಹಾಲಿನ ಮೇಲೆ 5 ರೂಪಾಯಿ ಸಹಾಯಧನ ನೀಡುತ್ತಿದೆ. ಈ ವರ್ಷದಿಂದ ಅದನ್ನು 7 ರೂ.ಗೆ ಹೆಚ್ಚಿಸಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.



ರೈತರಿಗೆ ಸಂಪೂರ್ಣವಾಗಿ ಪ್ರಸ್ತುತ ಪ್ರೋತ್ಸಾಹಧನ ತಲುಪುತ್ತಿಲ್ಲ ಎಂಬ ವಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಬೆಲೆ ಏರಿಕೆ ಹೊರತಾಗಿಯೂ ಸರ್ಕಾರದಿಂದ ನೆರವು ಮುಂದುವರಿಯುತ್ತದೆ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಸರ್ಕಾರದ ಹಿಂದಿನ ಅವಧಿಯ (2013-18) ಪ್ರಣಾಳಿಕೆ ಭರವಸೆಗಳನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, 165 ಭರವಸೆಗಳ ಪೈಕಿ 158 ಭರವಸೆಗಳನ್ನು ಈಡೇರಿಸಲಾಗಿತ್ತು. ಇದರ ಜೊತೆಗೆ ಬಜೆಟ್‌ನಲ್ಲಿ ಘೋಷಿಸದೆ 30 ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದರು. ಪ್ರಸ್ತುತ (2023ರ ನಂತರ) ಪ್ರಣಾಳಿಕೆಯಲ್ಲಿನ 593 ಭರವಸೆಗಳ ಪೈಕಿ 293 ಭರವಸೆಗಳನ್ನು ಈಗಾಗಲೇ ಈಡೇರಿಸಲಾಗಿದೆ.

ಪುಟ 2ಕ್ಕೆ

## ಸಂಸತ್ ಅಧಿವೇಶನ ಅಂತ್ಯ

**ನವದೆಹಲಿ:** ಚಳಿಗಾಲದ ಸಂಸತ್ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಕಲಾಪ ಆರಂಭವಾದ ಸ್ವಲ್ಪ ಸಮಯದಲ್ಲೇ ಲೋಕಸಭೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಲೋಕಸಭೆ ಕಲಾಪ ಶುಕ್ರವಾರ ಆರಂಭವಾದ ಸ್ವಲ್ಪ ಸಮಯದ ನಂತರ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು. ಈ ಅಧಿವೇಶನದಲ್ಲಿ ಸದನವು ಶೇಕಡಾ 111ರಷ್ಟು ಫಲಪ್ರದವಾಗಿತ್ತು ಎಂದು ಓಂ ಬಿರ್ಲಾ ಹೇಳಿದರು.

ರಾಜ್ಯಸಭೆಯ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಸಭಾಪತಿ ಸಿ.ಪಿ ರಾಧಾಕೃಷ್ಣನ್ ಅವರು ಹೆಚ್ಚಿನ ಉತ್ಪಾದಕತೆ ಮತ್ತು ಫಲಪ್ರದ ಚರ್ಚೆಗಳಿಗಾಗಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಇದರೊಂದಿಗೆ 15 ದಿನಗಳ ಸಂಸತ್

ಪುಟ 2ಕ್ಕೆ

## ಹುಲಿ ಹತ್ಯೆ: ನಾಲ್ವರು ಆರೋಪಿಗಳಿಗೆ ಜಾಮೀನು

**ಚಾಮರಾಜನಗರ:** ಮಲೆ ಮಹದೇಶ್ವರ ವನ್ಯಧಾಮದಲ್ಲಿ ನಡೆದಿದ್ದ ಹುಲಿ ಹತ್ಯೆ ಪ್ರಕರಣದ ಆರೋಪಿಗಳಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.



ಹಸುವಿನ ಮಾಲೀಕ ಚಂದು, ಸಿದ್ದರಾಜು, ಸಂಪು ಹಾಗೂ ಗಣೇಶ ಎಂಬವರು ಹುಲಿ ಕೊಂದ ಆರೋಪ ಹೊತ್ತಿದ್ದರು. ಕೊಳ್ಳೇಗಾಲ ಜೆಎಂಎಫ್‌ಸಿ ನ್ಯಾಯಾಲಯದಿಂದ ಜಾಮೀನು ಮಂಜೂರಾಗಿದೆ. ಮಲೆ ಮಹದೇಶ್ವರಬೆಟ್ಟದ ವನ್ಯಧಾಮದ ಪಚ್ಚೆದೊಡ್ಡಿ ಅರಣ್ಯ ಪ್ರದೇಶದಲ್ಲಿ ಅ.2ರಂದು ಹುಲಿಯೊಂದನ್ನು ಮೂರು ಭಾಗಗಳಾಗಿ ತುಂಡರಿಸಿ ಭೀಕರವಾಗಿ ಹತ್ಯೆ ಮಾಡಲಾಗಿತ್ತು. ತಲೆಯಿಂದ ಭುಜದವರೆಗೆ ಒಂದು ಭಾಗ, ಭುಜದಿಂದ ಹೊಟ್ಟೆವರೆಗೆ

ಪುಟ 2ಕ್ಕೆ

## ರನ್ಯಾ ರಾವ್‌ಗೆ ಹೈಕೋರ್ಟ್ ಶಾಕ್: ಕಾಫಿಪೋಸಾ ಪ್ರಶ್ನಿಸಿದ್ದ ಅರ್ಜಿ ವಜಾ

**ಬೆಂಗಳೂರು:** ಗೋಲ್ಡ್ ಸ್ಮಗ್ಲಿಂಗ್ ಕೇಸ್‌ನಲ್ಲಿ ಸಿಕ್ಕಿಬಿದ್ದಿರುವ ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರ ಕಾಫಿಪೋಸಾ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ಹೈಕೋರ್ಟ್ ಮತ್ತೆ ಶಾಕ್ ನೀಡಿದೆ.

ಗೋಲ್ಡ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಡಿಆರ್‌ಐ ಅಧಿಕಾರಿಗಳು ನಟಿ ರನ್ಯಾ ರಾವ್ ಅವರನ್ನು ಬಂಧಿಸಿದ್ದರು. ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಡಿಆರ್‌ಐ ರನ್ಯಾ ರಾವ್ ಜಾಮೀನು ಪಡೆಯದಂತೆ ಕಾಫಿಪೋಸಾ ಕಾಯ್ದೆಯನ್ನು ವಿಧಿಸಿತ್ತು. ಇದರಿಂದಾಗಿ ಒಂದು ವರ್ಷ ಜೈಲಿನಲ್ಲಿಯೇ ಇರಬೇಕಾದ ಅನಿವಾರ್ಯ ಪರಿಸ್ಥಿತಿ




ಎದುರಾಗಿತ್ತು. ಈ ಹಿನ್ನೆಲೆ ರನ್ಯಾ ಕಾಫಿಪೋಸಾ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಶುಕ್ರವಾರ ರನ್ಯಾ ರಾವ್ ವಿಚಾರಣೆ ನಡೆಸಿದ

ಪುಟ 2ಕ್ಕೆ

## ಬೈರತಿ ಬಸವರಾಜ್‌ಗೆ ಸಂಕಷ್ಟ: ಜಾಮೀನಿಗೆ ಹೈಕೋರ್ಟ್ ನಿರಾಕರಣೆ

**ಬೆಂಗಳೂರು:** ರೌಡಿಶೀಟರ್ ಬಿಕ್ಲು ಶಿವ ಕೊಲೆ ಕೇಸ್‌ನಲ್ಲಿ ಮಾಜಿ ಸಚಿವ ಬೈರತಿ ಬಸವರಾಜ್ ಅವರಿಗೆ ಸಂಕಷ್ಟ ಎದುರಾಗಿದೆ. ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಲು ನಿರಾಕರಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ಮಾಜಿ ಸಚಿವರಿಗೆ ಬಂಧನ ಭೀತಿ ಎದುರಾಗಿದೆ.



ಕೋಕಾ ಕಾಯ್ದೆಯನ್ನು ಬೈರತಿ ಬಸವರಾಜ್ ಮೇಲೆ ಸಿಐಡಿ ಹಾಕಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಬಸವರಾಜ್‌ಗೆ ಈ ವಿಚಾರದಲ್ಲಿ ರಿಲೀಫ್ ಸಿಕ್ಕಿದೆ. ಆದರೆ, ಬಂಧನದಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿದ್ದ ಮಾಜಿ ಸಚಿವರಿಗೆ ಶಾಕ್ ಆಗಿದೆ.

ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಲು ಸಾಧ್ಯವಿಲ್ಲ. ನಿಯಮಾನುಸಾರವಾಗಿ ಕೆಳಹಂತದ ನ್ಯಾಯಾಲಯದಲ್ಲಿಯೇ ನಿರೀಕ್ಷಣಾ ಜಾಮೀನು ಪಡೆದುಕೊಳ್ಳಬಹುದು. ನಿರೀಕ್ಷಣಾ ಜಾಮೀನು

ಪುಟ 2ಕ್ಕೆ

## ತ.ನಾಡಿನ 97 ಲಕ್ಷ ಮತದಾರರಿಗೆ ಕೊಕ್

### ಎಸ್‌ಐಆರ್ ವಿರೋಧಿಸಿದ್ದ ಡಿಎಂಕೆ ಪಕ್ಷಕ್ಕೆ ತೀವ್ರ ಹೊಡೆತ

**ಚೆನ್ನೈ:** ತಮಿಳುನಾಡಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಮತದಾರ ಪಟ್ಟಿಯಿಂದ 97 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ಅಳಿಸಿ ಹಾಕಲಾಗಿದೆ. ಈ ಮೂಲಕ ಆಡಳಿತಾರೂಢ ಡಿಎಂಕೆಗೆ ತೀವ್ರ ಹೊಡೆತ ನೀಡಿದೆ.

ರಾಜ್ಯದ 38 ಜಿಲ್ಲೆಗಳಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಗಳು ಶುಕ್ರವಾರ ಬಿಡುಗಡೆ ಮಾಡಿದ ಕರಡು ಮತದಾರರ ಪಟ್ಟಿಯಿಂದ 97 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರನ್ನು ಕೈಬಿಡಲಾಗಿದೆ. ಸದ್ಯ ಇರುವ 6.41 ಕೋಟಿ ಮತದಾರ ಪಟ್ಟಿಯಿಂದ 97 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ಡಿಲೀಟ್ ಮಾಡಲಾಗಿದೆ.

ರಾಜ್ಯದ ಮತದಾರರ ಪಟ್ಟಿಯ ಗಾತ್ರವು ಶೇ.15.2ರಷ್ಟು ಅಂದರೆ 5.4 ಕೋಟಿಗೆ ಕುಗ್ಗಿದೆ ಎಂದು ಶುಕ್ರವಾರ ಅಧಿಕೃತವಾಗಿ ಬಿಡುಗಡೆಯಾದ ಅಂಕಿಅಂಶಗಳು ತಿಳಿಸಿವೆ. ಚೆನ್ನೈಯಲ್ಲಿ ಅತಿ ಹೆಚ್ಚು ಶೇ.35. 6ರಷ್ಟು ದೊಡ್ಡ ಕುಸಿತವನ್ನು ಕಂಡಿದೆ. 40.04 ಲಕ್ಷ ಮತದಾರರ ಪೈಕಿ 14.25 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ. ಕೈಬಿಡಲಾದ 97.4 ಲಕ್ಷ ಮತದಾರರ ಹೆಸರು



ಗಳಲ್ಲಿ ಸರಿ ಸುಮಾರು 53 ಲಕ್ಷ (ಶೇ.54) ಮತದಾರರು ಸ್ಥಳಾಂತರವಾಗಿರುವುದಾಗಿ ತಿಳಿಸಲಾಗಿದೆ.

ಕೈಬಿಡಲಾದ ಮತದಾರರ ಪೈಕಿ 27 ಲಕ್ಷ ಮತದಾರರು (ಶೇ.28) ಮೃತಪಟ್ಟಿದ್ದಾರೆ. 13.6 ಲಕ್ಷ (ಶೇ.14) ಮತದಾರರು ಪತ್ತೆಯಾಗಿಲ್ಲ, 3.98 ಲಕ್ಷ (ಶೇ.4) ಮತದಾರರು ನಕಲು ಮತದಾರರು ಎನ್ನಲಾಗಿದೆ. ಸುಮಾರು 16,400 (ಶೇ.0.2) ಮತದಾರರ ಹೆಸರು ಕೈಬಿಡಲು ಇತರ ಕಾರಣ ನೀಡಲಾಗಿದೆ.

ಚೆಂಗಲ್ಪಟ್ಟು, ತಿರುಪ್ಪೂರ್, ಕೊಯಮತ್ತೂರು ಮತ್ತು ಕಾಂಚೀಪುರಂನಲ್ಲಿಯೂ ಮತದಾರರ ಸಂಖ್ಯೆಯಲ್ಲಿ ತೀವ್ರ ಕಡಿಮೆಯಾಗಿದೆ. ಈ ಜಿಲ್ಲೆಗಳಲ್ಲಿ ಕ್ರಮವಾಗಿ 7 ಲಕ್ಷ, 5.6 ಲಕ್ಷ, 6.5 ಲಕ್ಷ ಮತ್ತು 2.7 ಲಕ್ಷ ಮತದಾರರಿದ್ದಾರೆ.

## ಸಿಎಂ ಸಿದ್ದು ಆಪ್ತರ 'ಡಿನ್ನರ್ ಪಾಲಿಟಿಕ್ಸ್'

* ಸಿದ್ದರಾಮಯ್ಯ-ಡಿ.ಕೆ.ಶಿವಕುಮಾರ್ ಬಣಗಳ ರಾಜಕೀಯ ಮೇಲಾಟ

ಬೆಳಗಾವಿ: ಬೆಳಗಾವಿ ಚಳಿಗಾಲದ ಅಧಿವೇಶನ ಮುಗಿಯುವರೆಗೂ ಕಾಂಗ್ರೆಸ್ ಬಣಗಳ ಡಿನ್ನರ್ ಪಾಲಿಟಿಕ್ಸ್ ಮುಂದುವರಿದಿತ್ತು. ಗುರುವಾರ ರಾತ್ರಿಯೂ ಸಿಎಂ ಸಿದ್ದರಾಮಯ್ಯ ಬಣದ ಸಚಿವರು ಡಿನ್ನರ್ ಮೀಟಿಂಗ್ ನಡೆಸುವ ಮೂಲಕ ಡಿ.ಕೆ.ಶಿವಕುಮಾರ್ ಬಣಕ್ಕೆ ಮತ್ತೊಮ್ಮೆ ತಿರುಗೇಟು ನೀಡಿದ್ದಾರೆ.

ಸಚಿವ ಸತೀಶ್ ಜಾರಕಿಹೊಳಿ ಅವರು ಗುರುವಾರ ರಾತ್ರಿ ಬೆಳಗಾವಿಯ ತಮ್ಮ ನಿವಾಸದಲ್ಲಿ ಆಯೋಜಿಸಿದ್ದ ಔತಣಕೂಡಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿರುವುದು ಕುತೂಹಲ ಹೆಚ್ಚಾಗುವಂತೆ ಮಾಡಿದೆ.

ಸಿಎಂ ಸಿದ್ದರಾಮಯ್ಯ ಅವರ ಜೊತೆ ಸಚಿವರಾದ ಜಿ.ಪರಮೇಶ್ವರ್, ಎಚ್.ಸಿ ಮಹಾದೇವಪ್ಪ, ಜಮೀರ್ ಅಹ್ಮದ್ ಖಾನ್, ಎಂ.ಸಿ ಸುಧಾಕರ್, ಮಾಜಿ ಸಚಿವ ಕೆ.ಎನ್.ರಾಜಣ್ಣ, ಶಾಸಕ ಎ.ಎಸ್ ಪೊನ್ನಣ್ಣ ಮತ್ತಿರರು ಹಾಜರಿದ್ದರು. ಇವರೆಲ್ಲರೂ ಸಿದ್ದರಾಮಯ್ಯ ಅವರ




### ಒಟ್ಟಿಗೆ ಊಟ ಮಾಡಿದರೆ ತಪ್ಪೇನು?

**ಬೆಳಗಾವಿ:** ಯಾರಾದರೂ ಒಟ್ಟಿಗೆ ಸೇರಿ ಊಟ ಮಾಡಿದರೆ ಬೇಡ ಎಂದು ಹೇಳಲು ಆಗುತ್ತದೆಯೇ? ನನಗೇಕೆ ಅದೆಲ್ಲಾ? ಹೊರಗಡೆಯಿಂದ ಬಂದಿದ್ದೀವಿ. ಊಟ ಮಾಡುವುದರಲ್ಲಿ ತಪ್ಪೇನಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ.

ಬೆಳಗಾವಿಯಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದರು. ಸತೀಶ್ ಜಾರಕಿಹೊಳಿ ಮನೆಯಲ್ಲಿ ಗುರುವಾರ ರಾತ್ರಿ ಡಿನ್ನರ್ ಮೀಟಿಂಗ್ ನಡೆದಿರುವ ಬಗ್ಗೆ ಪ್ರಶ್ನಿಸಿದಾಗ, ಎಲ್ಲ ಸೇರಿ ಊಟ ಮಾಡೋದ್ರಲ್ಲಿ ತಪ್ಪು ಹುಡುಕಬೇಡಿ

# ಬೀದಿ ದೀಪ ಅಳವಡಿಸುವಂತೆ ಒತ್ತಾಯ



ಚಾಮರಾಜನಗರ, ನಗರದ ಸೋಮವಾರಪೇಟೆಗೆ ಹಾದು ಹೋಗಿರುವ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವಂತೆ ಒತ್ತಾಯಿಸಿ ಸೋಮವಾರಪೇಟೆ ಗ್ರಾಮಸ್ಥರು ಶುಕ್ರವಾರ ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಜಮಾಯಿಸಿದ ಗ್ರಾಮಸ್ಥರು ನಗರಸಭೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ನಗರಸಭಾ ಮಾಜಿ ಸದಸ್ಯ ಮಹದೇವು ಮಾತನಾಡಿ, ಬೀದಿ ದೀಪವಿಲ್ಲದೆ ಕತ್ತಲಿನಲ್ಲಿ ನಡೆದು ಹೋಗುತ್ತಿರುವ ವ್ಯಕ್ತಿಗೆ ಗುರುವಾರ ರಾತ್ರಿ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಡೆದಿದೆ. ಇದೇ ರೀತಿ ಈ ಹಿಂದೆಯೂ ಕೂಡ ಹಲವಾರು ಅಪಘಾತಗಳು ಸಂಭವಿಸಿದ್ದು, ಬೀದಿ ದೀಪ ಅಳವಡಿಸುವಂತೆ ನಗರಸಭಾ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಆರೋಪಿಸಿದರು.

ಬೀದಿ ದೀಪಗಳನ್ನು ಅಳವಡಿಸುವಂತೆ ಜಿಲ್ಲಾಡಳಿತ ಹಾಗೂ ಶಾಸಕರ ಗಮನಕ್ಕೂ ತಂದರೂ ಕೂಡ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು. ಚಾಮರಾಜನಗರ ಸತ್ತಿ–ಮಂಗಲ ರಸ್ತೆಯಲ್ಲಿ ದಿನನಿತ್ಯ ಹಗಲು ರಾತ್ರಿ ಬಾರಿ ವಾಹನಗಳು ಸಂಚರಿಸುತ್ತಿವೆ, ಆದರೆ ಈ ರಸ್ತೆ ಹಾದು ಹೋಗಿರುವ ಸೋಮವಾರಪೇಟೆ ರಸ್ತೆಯಲ್ಲಿ ಸಿಗ್ನಲ್, ಹಂಪ್ ಅಥವಾ ಬೀದಿ ದೀಪ ಅಳವಡಿಸಿಲ್ಲದೆ ಇರುವುದರಿಂದ ಅಪಘಾತಗಳು ಸಂಭವಿಸುತ್ತಲೇ ಇದೆ. ಆದ್ದರಿಂದ ಈ ಕೂಡಲೇ ನಗರಸಭಾ ಅಧಿಕಾರಿಗಳು ಹಾಗೂ ಜಿಲ್ಲಾಡಳಿತ ಎಚ್ಚೆತ್ತು ಸೂಕ್ತ ಕ್ರಮ ಕೈಗೊಂಡು ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಕ್ರಮವಹಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಸಿದ್ದಪ್ಪ, ಗುಂಡಪ್ಪ, ನಂಜುಂಡಯ್ಯ, ಚಿಕ್ಕಬಸವಯ್ಯ, ರುದ್ರಸ್ವಾಮಿ, ಜಗದೀಶ್, ರಾಜು, ಮಹದೇವು, ಶಿವಪ್ಪ, ಮುತ್ತುರಾಜು ಸೇರಿದಂತೆ ಇತರರು ಭಾಗವಹಿಸಿದರು.

# ಚೆಂಡು ಮಲ್ಲಿಗೆ ಮುಂದುವರಿಸಿ



ಚಾಮರಾಜನಗರ, ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಹೋಬಳಿಯ ತ್ರಿಯಂಬಕಪುರ ಸಮೀಪದಲ್ಲಿರುವ ಸಿಸಿಜಿಬಿ (ಚೆಂಡು ಮಲ್ಲಿಗೆ ಕಂಪನಿ) ಮುಂದುವರಿಸಬೇಕು ಎಂದು ಒತ್ತಾಯಿಸಿ ಚೆಂಡು ಮಲ್ಲಿಗೆ ಬೆಳೆಗಾರರು ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು.

ಸುಮಾರು 10 ವರ್ಷಗಳಿಂದ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯ ಸುತ್ತಮುತ್ತಲು 5 ಸಾವಿರ ದಿಂದ 6 ಸಾವಿರ ರೈತರು ಚೆಂಡು ಹೂಬೆಳೆಯುತ್ತಿದ್ದಾರೆ. ಇದರಿಂದ ಉತ್ತಮ ಜೀವನ ನಡೆಸುತ್ತಿದ್ದಾರೆ. ಚೆಂಡು ಮಲ್ಲಿಗೆ ಬೆಳೆಯನ್ನು ನಂಬಿ 10 ಸಾವಿರ ಕುಟುಂಬ ವಿದೆ.ರೈತರು ನೆಮ್ಮದಿಯಿಂದ ಬದುಕು ಕಟ್ಟಿಕೊಟ್ಟಿದ್ದಾರೆ . ಬೇರೆ ಫಸಲು ಮಾಡಿದರೆ ಕಾಡುಪ್ರಾಣಿಗಳು ನಾಶ ಮಾಡುತ್ತದೆ ಚೆಂಡು ಹೂ ಬೆಳೆ ಯನ್ನು ಯಾವುದೇ ಕಾಡುಪ್ರಾಣಿ ನಾಶ ಮಾಡುವುದಿಲ್ಲ. ಚೆಂಡುಮಲ್ಲಿಗೆ ಬೀಜ, ಗೊಬ್ಬರವನ್ನು ಕಂಪನಿ ಕೊಡುತ್ತದೆ ಅಲ್ಲದೆ ಬೆಳೆದ ಹೂ ಕಂಪನಿಯು ಬೆಂಬಲ ಬೆಲೆಯಲ್ಲಿ ತೆಗೆದುಕೊಳ್ಳುತ್ತದೆ ಇದರಿಂದ ರೈತರಿಗೆ ಲಾಭದಾಯಕ ವಾಗಿದೆ ಇಂತಹ ಕಂಪನಿ ಮುಚ್ಚುವಂತೆ ಕೆಲವರು ಹೋರಾಟ ಮಾಡುತ್ತಿದ್ದಾರೆ ಒಂದು ವೇಳೆ ಚೆಂಡು ಮಲ್ಲಿಗೆ ಕಾರ್ಖಾನೆ ಮುಚ್ಚಿದರೆ ಸಾವಿರಾರು ರೈತ ಕುಟುಂಬಗಳು ಬೀದಿಗೆ ಇರಬೇಕಾಗುತ್ತದೆ ಆಗಾಗಿ ಯಾವುದೇ ರೈತರಿಗೆ ಅನುಕೂಲಕರವಾದ ಚೆಂಡು ಮಲ್ಲಿಗೆ ಕಂಪನಿಯ ಮುಂದುವರಿಸಬೇಕು . ಒಂದು ವೇಳೆ ಮುಚ್ಚಿದರೆ ಉಗ್ರ ಹೋರಾಟ ಮಾಡುವುದಾಗಿ ರೈತರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕೆಂಪರಾಜು, ಕೆ.ಬಸಪ್ಪ, ನವೀನ್, ಬಸವಣ್ಣ, ನಟರಾಜು ಭೋಗೇಶ್,ಅನಿಲ್, ಮಹೇಶ್ ,ಶಿವಸ್ವಾಮಿ, ಬಸಪ್ಪ, ಮಹದೇವಪ್ಪ ಇತರರು ಭಾಗವಹಿಸಿದ್ದರು.

# ಕೊಲೆ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿದ ನ್ಯಾಯಾಲಯ

ಗುಂಡ್ಲುಪೇಟೆ: ತಾಲ್ಲೂಕಿನ ಸೋಮಹಳ್ಳಿ ಗ್ರಾಮದ ಮಹೇಶ್ ಮತ್ತು ರತ್ನಮ್ಮಎಂಬ ಅರೋಪಿಗಳಿಗೆ ಪ್ರಭಾವತಿ. ಜಿ. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಾಮರಾಜನಗರ ರವರು ಈ ಕೆಳಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 18/12/2025ರಂದು ಆರೋಪಿತರಿಗೆ ಶಿಕ್ಷೆ ವಿಧಿಸಿದ್ದಾರೆ.

### ಪ್ರಕರಣದ ಮಾಹಿತಿ

ಗುಂಡ್ಲುಪೇಟೆ ತಾಲ್ಲೋಕು ಸೋಮಹಳ್ಳಿ ಗ್ರಾಮದ ವಾಸಿಗಳಾದ ಆರೋಪಿಗಳಾದ ಮಹೇಶ ಬಿನ್ ಗಂಗನಾಯಕ, 45 ವರ್ಷ, ಮತ್ತು ರತ್ನಮ್ಮ ಕೋಂ ಮಹೇಶ ಸಾಕ್ಷಿ 3 ಗೌರಮ್ಮ ರವರಿಗೆ ಸುಮಾರು 17 ವರ್ಷಗಳ ಹಿಂದೆ ಆರೋಪಿ 1 ಮಹೇಶರವರ ಜೊತೆ ಮದುವೆ ಆಗಿದ್ದು, ಇವರಿಗೆ ಒಂದು ಹೆಣ್ಣು ಮಗುವಾಗಿದ್ದು, ಸುಮಾರು 10–12 ವರ್ಷಗಳ ಹಿಂದೆ ಒಂದು ದಿನ ಸಾಕ್ಷಿ 1 ಮಹದೇವಸ್ವಾಮಿ ಸಾಕ್ಷಿ 2 ಗೌರಮ್ಮರವರ ಮನೆಗೆ ಹೋಗಿ ಸಾಕ್ಷಿ 2 ರವರ ಜೊತೆ ಮಾತನಾಡುತ್ತಿದ್ದಾಗ, ಆರೋಪಿ 1 ರವರ ತಂದೆ ಗಂಗನಾಯಕ ರವರು ನೋಡಿ ಸಾಕ್ಷಿ 1 ಮತ್ತು 2 ರವರಿಗೆ ಅಕ್ರಮ ಸಂಬಂಧ ಇದೆ ಎಂದು ಆರೋಪ ಮಾಡಿ ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿಸಿರುತ್ತಾರೆ. ಸದರಿ ಪಂಚಾಯಿತಿಯಲ್ಲಿ ಸಾಕ್ಷಿ 1 ಮಹದೇವಸ್ವಾಮಿ ಸಾಕ್ಷಿ 2 ಗೌರಮ್ಮರವರನ್ನು ನಾನೇ ಮದುವೆ ಆಗುತ್ತೇನೆ ಎಂದು ಒಪ್ಪಿಕೊಂಡು ಮದುವೆ ಆದ ನಂತರ ಗೌರಮ್ಮ ರವರು ಆರೋಪಿ 1 ರವರದಿಂದ ಬೇರ್ಪಟ್ಟಿರುತ್ತಾರೆ.

ತದನಂತರದಲ್ಲಿ ಆರೋಪಿ 1 ರವರು ಆರೋಪಿ 2 ರವರನ್ನು ಈಗ್ಗೆ ಸುಮಾರು 7–8 ವರ್ಷಗಳ ಹಿಂದೆ ಮದುವೆ ಆಗಿರುತ್ತಾರೆ. ಇವರಿಗೆ ಮಕ್ಕಳಾಗಿರುವುದಿಲ್ಲ. ಆದ್ದರಿಂದ ಆರೋಪಿಗಳು ಸಾಕ್ಷಿ 1 ಮಹದೇವಸ್ವಾಮಿ ಸಾಕ್ಷಿ 2 ಗೌರಮ್ಮರವರ ಮೇಲೆ ಹೊಟ್ಟೆಕಿಚ್ಚು ಪಡುತ್ತಿದ್ದರು. ಆರೋಪಿ 1 ರವರು ಮಹದೇವಸ್ವಾಮಿಯು ನನ್ನ ಹೆಂಡತಿಯನ್ನು ಇಟ್ಟುಕೊಂಡು ಮಕ್ಕಳನ್ನು ಪಡೆದು ಒಟ್ಟಿಗೆ ಜೀವನ ಮಾಡಿಕೊಂಡು ಹೋಗುತ್ತಿದ್ದಾನಲ್ಲ, ನನಗೆ ಮಾತ್ರ ಮಕ್ಕಳಾಗಲಿಲ್ಲವಲ್ಲ ಎಂದು ದ್ವೇಷವನ್ನಿಟ್ಟುಕೊಂಡು ದಿನಾಂಕ:24.08.2020 ರಂದು ಸಾಕ್ಷಿ 1 ರವರ ಮಗಳಾದ ಮಹಾಲಕ್ಷ್ಮಿಯು ಗುಂಡ್ಲುಪೇಟೆ ತಾಲ್ಲೋಕು ಸೋಮಹಳ್ಳಿ ಗ್ರಾಮದಲ್ಲಿ ತನ್ನ ಸೋದರ ಅತ್ತೆಯ ಮಗನಾದ ಸಾಕ್ಷಿ 3 ರವರ ಮನೆಗೆ ವಾಪಸ್ ತನ್ನ ಮನೆಗೆ ಒಬ್ಬಳೇ ಹೋಗುತ್ತಿದ್ದಾಗ ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಆರೋಪಿಗಳು ಮಹಾಲಕ್ಷ್ಮಿಯನ್ನು ಕೊಲೆ ಮಾಡುವ ಸಮಾನ ಉದ್ದೇಶದಿಂದ ದಾರಿಯಲ್ಲಿ ತಮ್ಮ ಮನೆಯ ಮುಂದೆ ನಡೆದುಕೊಂಡು ಹೋಗುತ್ತಿದ್ದ ಮಹಾಲಕ್ಷ್ಮಿಯನ್ನು ಅಪಹರಿಸಿ ತಮ್ಮ ಮನೆಯೊಳಕ್ಕೆ ಎತ್ತಿಕೊಂಡು ರೋಗಿ ತಮ್ಮ ಮನೆಯಲ್ಲಿದ್ದ ನೀರಿನ ತೊಟ್ಟಿಗೆ ಮುಳುಗಿಸಿ. ಉಸಿರುಗಟ್ಟಿಸಿ ಕೊಲೆ ಮಡಿ ಆಕೆಯ ಮೃತ ದೇಹವನ್ನು ಒಂದು ಸಿಮೆಂಟ್ ಚೀಲದಲ್ಲಿ ಹಾಕಿ ಸಾಕ್ಷಿ ನಾಶಪಡಿಸಿರುವುದು ರುಜುವಾತಾಗಿಗೆಯೆಂದು ತೀರ್ಮಾನಿಸಿ, ಚಾಮರಾಜನಗರದ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಜಿ. ರವರು ಆರೋಪಿಗಳಾದ ಮಹೇಶ ಮತ್ತು ರತ್ನಮ್ಮ ರವರಿಗೆ ಭಾರತೀಯ ದಂಡ ಸಂಹಿತೆ ಕಲಂ. 302 ಸ/ವ 34 ಅಪರಾಧಕ್ಕೆ ಜೀವಾವಧಿ ಶಿಕ್ಷೆ ಮತ್ತು ತಲಾ 5 ಸಾವಿರ ರೂಪಾಯಿ ದುಡವನ್ನು ವಿಧಿಸಿದ್ದು, ಹಾಗೂ ಐಪಿಸಿ ಕಲಂ.363 ಸ/ವ 34 ಗೆ 5 ವರ್ಷ ಶಿಕ್ಷೆ ತಲಾ 3 ಸಾವಿರ ರೂಪಾಯಿ ದಂಡ, ದಂಡ ತೆರಲು ತಪ್ಪಿದಲ್ಲಿ 1 ತಿಂಗಳ ಶಿಕ್ಷೆ, ಹಾಗೂ ಐಪಿಸಿ ಕಲಂ. 201 ಗೆ 2 ವರ್ಷ ಶಿಕ್ಷೆ 2 ಸಾವಿರ ರೂಪಾಯಿ ದಂಡ, ದಂಡ ತೆರಲು ತಪ್ಪಿದಲ್ಲಿ 1 ತಿಂಗಳ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿರುತ್ತಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರುಗಳು ವಿಚಾರಣೆ ನಡೆಸಿ ವಾದ ಮಂಡಿಸಿರುತ್ತಾರೆ.

# ಸಾಲ ಪಡೆದು, ಸಕಾಲದಲ್ಲಿ ಮರು ಪಾವತಿಸಿ ಆರ್ಥಿಕ ಶಿಸ್ತು ರೂಡಿಸಿಕೊಳ್ಳಿ

## ಎಸ್ಪಿ ಡಾ.ಬಿ.ಟಿ.ಕವಿತಾ ಹೇಳಿಕೆ | ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ




ಚಾಮರಾಜನಗರ: ಹೈನುಗಾರಿಕೆ, ಸಣ್ಣ ವ್ಯಾಪಾರ ಹಾಗು ಕೃಷಿ ಆಧಾರಿತವಾಗಿ ಖಾಸಗಿ ಪೈನಾನ್ಸ್‌ಗಳಲ್ಲಿ ಸಾಲ ಪಡೆಯುವವರು ಅದನ್ನು ಸಮರ್ಪಕವಾಗಿ ವಿನಿಯೋಗಿಸಿ ಸಕಾಲದಲ್ಲಿ ಮರು ಪಾವತಿ ಮಾಡಿ, ಆರ್ಥಿಕ ಶಿಸ್ತು ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ತಿಳಿಸಿದರು.

ನಗರದ ಡಾ. ರಾಜಕುಮಾರ್ ಕಲಾಮಂದಿರದಲ್ಲಿ ಬಿಎಸ್‌ಎಸ್ ಸೋನಾಟ ಮೈಕ್ರೋ ಫೈನಾನ್ಸ್ ಕಂಪನಿಯಿಂದ ಸಿಆರೆಸ್‌ಆರ್ ಫಂಡ್ ನಡಿಯಲ್ಲಿ ಜಿಲ್ಲೆಯ ವ್ಯಾಪ್ತಿಯ ಸರ್ಕಾರಿ ಶಾಲೆಯಲ್ಲಿ ಎಸ್ ಎಸ್‌ಎಲ್‌ಸಿ ಹಾಗು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ 279 ಮಂದಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರಮಾಣ ಪತ್ರವನ್ನು ವಿತರಿಸಿ ಮಾತ ನಾಡಿದರು. ಕಳೆದ ವರ್ಷ ಖಾಸಗಿ ಪೈನಾನ್ಸ್‌ಗಳಲ್ಲಿ ಸಾಲ ಪಡೆದು ಬಹಳಷ್ಟು ಮಂದಿ ಕಟ್ಟಲು ಸಾಧ್ಯ ವಾಗದೆ ಮನೆ ಖಾಲಿ ಮಾಡುವಂತಹ ಪರಿಸ್ಥಿತಿ ನಿರ್ಮಾಣ ವಾಗಿತ್ತು. ಇದಕ್ಕೆ ಕಾರಣ ಹೆಚ್ಚಿನ ಕಡೆ ಸಾಲ ಪಡೆದುಕೊಂಡು ಕಟ್ಟಲು ಸಾಧ್ಯವಾಗದ ಸ್ಥಿತಿ ಬರುವುದು. ಹೀಗಾಗಿ ಸಾಲ ಕೊಡುವ ಮುನ್ನವೇ ಅವರ ಆರ್ಥಿಕ ಸ್ಥಿತಿಯನ್ನು ಪರಿಶೀಲನೆ ಸಾಲ ನೀಡಿ, ಇದರಿಂದ ಗೊಂದಲವಾಗುವುದಿಲ್ಲ. ಒಳ್ಳೆಯ ಉದ್ದೇಶಕ್ಕೆ ಸಾಲ ನೀಡುವ ಕಂಪನಿಗಳಿಗೂ ಸಹ ತೊಂದರೆಯಾಗಿತ್ತು. ಸಾಲ ನೀಡುವಾಗಲೇ ಅವರು ಆರ್ಥಿಕತೆಯನ್ನು ಪರಿಶೀಲನೆ ಮಾಡಿ, ಸಾಲ ನೀಡಿದರೆ ಇಂಥ ಪ್ರಮಾದಗಳು ನಡೆಯು ತ್ತಿಲ್ಲ. ಅದೇ ರೀತಿ ಸಾಲ ಪಡೆಯುವ ತಾವುಗಳು ಸಹ ಮರು ಪಾವತಿ ಮಾಡಲು ಸಾಧ್ಯವಾಗುಷ್ಟು ಸಾಲವನ್ನು ಪಡೆದು ಸಕಾಲದಲ್ಲಿ ಮರು ಪಾವತಿ ಮಾಡಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಬಳಕೆ ಮಾಡಿ ಕೊಂಡು ಅವರನ್ನು ವಿದ್ಯಾವಂತರನ್ನಾಗಿ ಮಾಡಿ, ಉತ್ತಮ ಉದ್ಯೋಗವನ್ನು ಪಡೆಯುವ ನಿಟ್ಟಿನಲ್ಲಿ ಇಂಥ ಕಂಪನಿಗಳ ಸೇವೆಯನ್ನು ಪಡೆದುಕೊಳ್ಳಬೇಕು ಎಂದರು.

ಬಿಎಸ್‌ಎಸ್ ಸೋನಾಟ ಕಂಪನಿಯವರು ಸಾಮಾಜಿಕ ಜವಾಬ್ದಾರಿ ಹೊಣೆಗಾರಿಕೆಯನ್ನು ನಿಭಾಯಿಸುವ ನಿಟ್ಟಿನಲ್ಲಿ ಸಿಎಸ್‌ಆರ್ ಫಂಡ್ ಅನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಲು ಮುಂದಾಗಿದ್ದಾರೆ. ಕಳೆದ ವರ್ಷವು ಸಹ ಇಂಥ ಕಾರ್ಯಕ್ರಮ ನಡೆದಿತ್ತು. ಈ ವರ್ಷವು ಹೆಚ್ಚಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಬಿಎಸ್‌ಎಸ್ ಸೋನಾಟಾ ಕಂಪನಿಯ ಜೀಫ್ ಅಪರೇಟಿಂಗ್ ಮ್ಯಾನೇಜರ್ ಎಸ್. ಪಂಚಾ ಕ್ಷರಿ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳು ಬುದ್ದಿವಂತರಿರುತ್ತಾರೆ. ಅವರುಗಳೇ ಹೆಚ್ಚು ಉದ್ಯೋಗ ಹಾಗು ಇತರೇ ಕಂಪನಿಗಳಲ್ಲಿ ಕೆಲಸ ಪಡೆದುಕೊಳ್ಳುವವರು. ನಾನು ಸಹ ಸರ್ಕಾರಿ ಶಾಲೆಯಲ್ಲಿಯೇ ಓದಿದವನು. ನಮ್ಮ ಬಿಎಸ್‌ಎಸ್ ಕಂಪನಿ ರಾಜ್ಯ ಅಲ್ಲದೇ ಹೊರ ರಾಜ್ಯಗಳಲ್ಲಿಯೂ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ 7 ಕಡೆ ಶಾಖೆಗಳನ್ನು ಆರಂಭಿಸಿ, ಬಡವರು ಹಾಗೂ ಮಧ್ಯಮ ವರ್ಗದವರ ಕನಸು ನೆನಸು ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ ಎಂದರು. ವಿದ್ಯಾರ್ಥಿ ವೇತನ, ಸಂಚಾರಿ ಆರೋಗ್ಯ ಸೇವೆ, ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ನೀಡುವ ಮೂಲಕ ಜಿಲ್ಲೆಯ ಅಭಿವೃದ್ದಿಯಲ್ಲಿ ನಾವು ಸಹ ಕೈಜೋಡಿಸುತ್ತೇವೆ ಎಂದರು. ಕಾರ್ಯಕ್ರಮದಲ್ಲಿ 279ಕ್ಕು ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣ ಕೆಯನ್ನು ನೀಡಿ ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಕಂಪನಿಯ ಉಪಾಧ್ಯಕ್ಷ ಶಂಕರರಾವ್, ಸಿಎಸ್‌ಆರ್ ಮ್ಯಾನೇಜರ್ ಪಂಡಿತ್ ಗಂಗಾಧರ್ ಪಾಟೀಲ್, ವಿಭಾಗೀಯ ವಲಯ ಮ್ಯಾನೇಜರ್ ಗಂಗಾಧರಯ್ಯ, ಸಹಾಯಕ ಮ್ಯಾನೇಜರ್ ಪ್ರಶಾಂತ್‌ಕುಮಾರ್, ಸಹಾಯಕ ಮ್ಯಾನೇಜರ್ ಚಂದ್ರು, ಸಿಂಧುಜಾ, ಅನಿಲ್ ಮೊದಲಾದವರು ಹಾಜರಿದ್ದರು.

# ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅಪರಾಧ ತಡೆ ರಸ್ತೆ ಸುರಕ್ಷತಾ ಸಪ್ತಾಹ



ಬೇಗೂರು: ತಾಲ್ಲೂಕಿನ ಬೇಗೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಪೊಲೀಸ್ ಠಾಣೆ ಬೇಗೂರು ವತಿಯಿಂದ ಅಪರಾಧ ತಡೆ ಮತ್ತು ಅಪಘಾತ ತಡೆಯ ಬಗ್ಗೆ ಹಾಗೂ ರಸ್ತೆ ಸುರಕ್ಷಿತ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಬೇಗೂರು ಪೊಲೀಸ್ ಸಬ್ ಇನ್ಸ್ ಪೆಕ್ಟರ್ ನವೀನ್ ಮಾತನಾಡಿ ಮಾದಕ ವಸ್ತುಗಳ ವ್ಯಾಸನ , ರಸ್ತೆ ಅಪಘಾತಗಳ ಅರಿವು, ಸೈಬರ್ ಕ್ರೈಂ ಜಾಗೃತಿ ಮತ್ತು ಇತರ ಅಪರಾಧಗಳ ತಡೆ ಬಗ್ಗೆ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ತರಬೇತಿ ಅಧಿಕಾರಿ ಹೆಚ್ ಎಸ್ ಪ್ರಸಾದ್, ಆಡಳಿತ ಅಧಿಕಾರಿ ಶ್ರೀನಿವಾಸ್ ಮತ್ತು ಗೋಪಿ ವಲ್ಲಭ, ಉಪನ್ಯಾಸಕರಾದ ರೂಪಶ್ರೀ ಕೆ.ಎನ್, ಮೈತ್ರೀಶ್ರೀ, ಮಮತ , ಸುನೀಲ್ ಕುಮಾರ್, ರಾಜು ಜಿ.ಎಂ, ಸಿದ್ದರಾಜು ಹಾಜರಿದ್ದರು.

# ಬೀದಿನಾಯಿ ದತ್ತು ಪಡೆಯಲು ಅಹ್ವಾನ

ಮೈಸೂರು: ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ದತ್ತು ಪಡೆದು ಅವುಗಳನ್ನು ಪೋಷಣೆ ಮಾಡಲು ಇಚ್ಚಿಸುವವರು ಪ್ರಾಣಿಗಳ ಸಂರಕ್ಷಣೆ ಸಂಕಲ್ಪ ಹೊಂದಿರುವವರು,



ಪ್ರಾಣಿ ಗಳ ಮೇಲೆ ದಯೆ ಇರುವವರು ಬೀದಿನಾಯಿಗಳನ್ನು ದತ್ತು ಪಡೆಯಲು ಅಥವಾ ಆಶ್ರಯ ತಾಣದಲ್ಲಿರುವ ಬೀದಿ ನಾಯಿಗಳಿಗೆ ಆಹಾರ ಪೂರೈಸಲು ಇಚ್ಚಿಸುವವರು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಹೂಟಗಳ್ಳಿ ನಗರಸಭೆಯ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು ಎಂದು ಹೂಟಗಳ್ಳಿ, ನಗರಸಭೆಯ ಪೌರಾಯುಕ್ತ ತಿಳಿಸಿದ್ದಾರೆ.

# ಮೃಗಾಲಯ: ನೌಕರರ ಖಾಯಂಗೊಳಿಸಿ

ಮೈಸೂರು: ಮೈಸೂರು ಮೃಗಾಲಯದಲ್ಲಿ 356 ಮಂದಿ ನೌಕರರಿದ್ದು ಅದರಲ್ಲಿ 9ಮಂದಿ ಮಾತ್ರ ಖಾಯಂ ನೌಕರರು ಅಧಿಕಾರಿಗಳಿದ್ದಾರೆ, ಮೃಗಾಲಯದಲ್ಲಿ ಜೀವವನ್ನೇ ಪಣಕಿಟ್ಟು ದುಡಿಯುವ ನೌಕರರು ಕಳೆದ 11ವರ್ಷಗಳಿಂದ ಶ್ರಮಿಸುತ್ತಿದ್ದಾರೆ, 18ಮಂದಿ ಅನುಕಂಪ ಆಧಾರದ ಮೇರೆಗೆ ದುಡಿಯುತ್ತಿದ್ದು ಒಳಗುತ್ತಿಗೆಯವರಿಗೆ ಮಾಸಿಕ 24ಸಾವಿರ ಸಂಬಳ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕೆಲಸಗಾರರಿಗೆ ಮಾಸಿಕ 14ಸಾವಿರ ನಿಗಧಿಪಡಿಸಿದ್ದು, ಮೃಗಾಲಯದ ಕಾರ್ಮಿಕ ಜೀವನೋಪಾಯದ ಆರ್ಥಿಕ ಭದ್ರತೆಗಾಗಿ ಕೆಲಸಮಾಡುತ್ತಿರುವ ಎಲ್ಲರನ್ನು ಖಾಯಂಗೊಳಿಸಬೇ ಕೆಂದು ಮತ್ತು ಸಿಸಿಎಫ್ ಅಧಿಕಾರಿಯನ್ನಾಗಿ ಗುಲ್ಬರ್ಗಾ ವಲಯಕ್ಕೆ ಸಂಬಂಧ ಪಟ್ಟವರಿದ್ದು ಸ್ಥಳೀಯ ಮೈಸೂರು ವಿಭಾಗದವರನ್ನೇ ನೇಮಕ ಮಾಡಲು ಕ್ರಮವನ್ನ ಕೈಗೊಳ್ಳಬೇಕೆಂದು ಶಾಸಕ ಟಿಎಸ್.ಶ್ರೀವತ್ಸ ಬೆಳಗಾವಿ ಅಧಿವೇಶನದಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಚಾಮರಾಜೇಂದ್ರ ಮೃಗಾಲಯದಲ್ಲಿ 139 ಮಂದಿಯನ್ನ ಕೆಲಸಗಳಿಗೆ ಭರ್ತಿ ಮಾಡಲೂ ಮಂಜೂರಾತಿಯಿದ್ದು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನ ಸಲ್ಲಿಸಲಾಗಿದೆ, ನ್ಯಾಯಾಲಯದಲ್ಲಿ ಕೆಲವು ಪ್ರಕರಣಗಳ ದಾವೆಗಳು ಮತ್ತು ಆಂತರಿಕ ಒಳಮೀಸಲಾತಿ ವಿಷಯವಾಗಿ ವಿಳಂಬವಾಗಿರುವ ಕಾರಣ ನೇಮಕಾತಿಯಾಗಿಲ್ಲ, ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ನೇರನೇಮಕಾತಿಗೆ ಕ್ರಮತೆಗೆದುಕೊಳ್ಳಲಾ ಗುವುದು ಎಂದರು.



# ಅಗ್ನಿಶಾಮಕ ಠಾಣೆ ಅನುದಾನಕ್ಕೆ ಮತ್ತೆ ಮನವಿ ಕೈ ಶಾಸಕ

ಮೈಸೂರು: ನಗರದ ಸರಸ್ವತಿಪುರಂನ ಅಗ್ನಿಶಾಮಕ ಠಾಣೆಯನ್ನು ಕೆಡವಿ ಕಟ್ಟುವುದು ಹಾಗೂ ಅಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕೆ ಅನುದಾನಕ್ಕಾಗಿ ಶಾಸಕ ಕೆ.ಹರೀಶ್ ಗೌಡ ಎರಡನೇ ಬಾರಿಗೆ ಅಧಿವೇಶನದಲ್ಲಿ ಮನವಿ ಮಾಡಿದರು.

ಆ.14ರ ಅಧಿವೇಶನದಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಿದ್ದರು. ಇದಾದ ಬಳಿಕ ಈಗ ಬೆಳಗಾವಿ ಅಧಿವೇಶನದಲ್ಲಿಯೂ ಈ ವಿಷಯವನ್ನು ಮತ್ತೆ ಸದನದ ಮುಂದೆ ತಂದಿದ್ದಾರೆ. ಇದ್ದಲ್ಲಿ ಅಗ್ನಿಶಾಮಕ ಠಾಣೆಯನ್ನು ಕೆಡವಿ ಹೊಸದಾಗಿ ಅಗ್ನಿಶಾಮಕ ಠಾಣೆ ಹಾಗೂ ಆವರಣದಲ್ಲಿ ವಸತಿ ಗ್ರಹ ನಿರ್ಮಾಣ ಮಾಡಲು ರೂ. 30.00 ಕೋಟಿಗಳ ಅನುದಾನ ಮಂಜೂರು ಮಾಡುವ ಬಗ್ಗೆ ಸರ್ಕಾರದ ನಿಲುವೇನು? ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸರಸ್ವತಿಪುರಂನಲ್ಲಿರುವ ಕಟ್ಟಡ ಲೋಕೋಪಯೋಗಿ ಇಲಾಖೆಗೆ ಒಳಪಡುವುದಿಲ್ಲ. ಅಗ್ನಿಶಾಮಕ ಠಾಣೆ ಮತ್ತು ಆವರಣದಲ್ಲಿರುವ ವಸತಿ ಕಟ್ಟಡಗಳನ್ನು ಅಗ್ನಿಶಾಮಕ ಇಲಾಖೆಯವರ ಪರಿಶೀಲಿಸಲಾಗಿದ್ದು, ಅಗ್ನಿಶಾಮಕ ಠಾಣೆಯ ಕಛೇರಿ ಕಟ್ಟಡವು ಭಾಗಶಃ ಕುಸಿದಿದ್ದು, ಇನ್ನುಳಿದ ಭಾಗವು ಶಿಥಿಲಾವಸ್ಥೆಯಲ್ಲಿರುತ್ತದೆ ಮನವಿಯಂತೆ ಅಧಿಕಾರಿಗಳ ಹಾಗೂ ವಸತಿಗೃಹಗಳು ಶಿಥಿಲಾವಸ್ತೆಯಲ್ಲಿರುವುದರಿಂದ ವಾಸಕ್ಕೆ ಯೋಗ್ಯವಿರುವುದಿಲ್ಲ ಎಂಬುದು ಗಮನಕ್ಕೆ ಬಂದಿದೆ ಎಂದರು.



ಹಾಲಿ ಇರುವ ಕಟ್ಟಡದ ವಾಸ್ತು ಶೈಲಿಯನ್ನೇ ಹೋಲುವಂತಹ ನಿರ್ಮಾಣದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಅಗತ್ಯ ನಕ್ಷೆಗಳು. 3ಡಿ ನಕ್ಷೆಗಳೊಂದಿಗೆ ಹಾಲಿ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಪುನರ್ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಪಡೆದು ಮೈಸೂರುಮಹಾನಗರ ಪಾಲಿಕೆ ಮುಖಾಂತರವಾಗಿ ಶೀಘ್ರವಾಗಿ ಪಡೆದು ಹಾಲಿ ಕಟ್ಟಡವನ್ನು ಕೆಡವಿ ಹೊಸ ಅಗ್ನಿಶಾಮಕ ಠಾಣೆ ಮತ್ತು ವಸತಿ ಗೃಹಗಳ ಕಟ್ಟಡ ನಿರ್ಮಾಣಕ್ಕೆ ನಿರ್ಣಯಿಸಲಾಗಿದೆ. ಹಳೆಯ ಅಗ್ನಿಶಾಮಕ ಠಾಣೆಯನ್ನು ಕೆಡವಿ ಹೊಸದಾಗಿ 8 ಬೇ ಅಗ್ನಿಶಾಮಕ ಠಾಣಾ ಮತ್ತು 30 ವಸತಿ ಗೃಹಗಳ ಕಟ್ಟಡಗಳನ್ನು ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆಯಿಂದ 0 ಕೋಟಿಗಳ ಅಂದಾಜು ದರ ಪಟ್ಟಿಯನ್ನು ಪಡೆದು ಅನುದಾನ ಮಂಜೂರು ಮಾಡುವಂತೆ ಅಗ್ನಿಶಾಮಕ ಇಲಾಖೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. 2025–26 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದಿಲ್ಲ. ಹೆಚ್ಚುವರಿ ಅನುದಾನ ಅವಕಾಶವಾಗುವುದಿಲ್ಲವಾದ್ದರಿಂದ ಪ್ರಸ್ತಾವನೆ ಮುಂದೂಡಲಾಗಿದೆ ಎಂದು ತಿಳಿಸಿರುತ್ತದೆ.

# ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ




ಚಾಮರಾಜನಗರ, ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.


ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿ ಪ್ರತಿಭಟನೆ ನಡೆಸಿದ ಹಿನ್ನೆಲೆ ಬಿಜೆಪಿ ಕಚೇರಿ ಮುಂಭಾಗದಲ್ಲಿ ಪ್ರತಿರೋಧವಾಗಿ ವ್ಯಕ್ತಪಡಿಸಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧವೇ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ಮಾಡಬೇಕಿದೆ. ನಿಮ್ಮ ಪಕ್ಷದ ಜನಪ್ರತಿನಿಧಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಅದಕ್ಕಾಗಿ ಜನಸಾಮಾನ್ಯರು ಬಲಿಯಾಗುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಬೇಂದ್ರಪ್ಪ, ಹೊನ್ನೂರು ಮಹದೇವಸ್ವಾಮಿ, ಎಸ್‌ಪಿ ಮೋರ್ಚಾದ ಅಧ್ಯಕ್ಷ ಚಂದ್ರಶೇಖರ್, ಎಸ್‌ಸಿ ಮೋರ್ಚಾದ ಅಧ್ಯಕ್ಷ ಮುತ್ತಿಗೆಮೂರ್ತಿ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್‌ಚಂದ್ರ, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಕುಲಗಾಣ ಶಾಂತಮೂರ್ತಿ, ನಗರಸಭಾ ಮಾಜಿ ಉಪಾಧ್ಯಕ್ಷೆ ಮಮತ ಬಾಲಸುಬ್ರಹ್ಮಣ್ಯಂ, ನಗರ ಮಂಡಲ ಅಧ್ಯಕ್ಷ ಶಿವರಾಜ್, ರಾಮಸಮುದ್ರ ಶಿವಣ್ಣ ಹಾಗೂ ಇತರರು ಭಾಗವಹಿಸಿದ್ದರು.

## ಪತ್ರಿಕಾಗೋಷ್ಠಿಯಲ್ಲಿ ಸಂತ್ರಸ್ತರು, ಜಾರಕೀಹೋಳಿ ಬ್ರಿಗೇಡ್ ನಿಂದ ನ್ಯಾಯಕ್ಕಾಗಿ ಮೊರೆ

# ರೈತರಿಗೆ ಸಾಗುವಳಿ ನೀಡಿದ ಜಮೀನು ಅಕ್ರಮ ಖಾತೆ ಆರೋಪ



ಗುಂಡ್ಲುಪೇಟೆ: ತಾಲೂಕಿನ ಜಕ್ಕಹಳ್ಳಿ ಎಲ್ಲೆಯ ಕಣಿಯನಪುರ ಕಾಲೋನಿಯ ದಲಿತರ (ಭೋವಿ) ಜನಾಂಗದ ಜಮೀನು ಐವತ್ತು ವರ್ಷದ ಹಿಂದೆ ಸಾಗುವಳು ಭೂಮಿಯಾಗಿ ಕುಮಾರ ಬೋವಿ, ಚಿನ್ನರಾಜು, ಚಿಕ್ಕಗೋವಿಂದಯ, ಪೊನ್ನ ಬೋವಿ, ನಟರಾಜು, ಮಾರಬೋವಿ ಎಂಬುವವರ ಜಮೀನನ್ನು ಪಿಟಿಷಿಯಲ್ ಆಕ್ಟ್ ಕಾಯ್ದೆಯಲ್ಲಿ ಸರ್ಕಾರ ನೀಡಿದೆ ಅದರೆ ಇಷ್ಟುವರ್ಷ ವ್ಯವಸಾಯ ಮಾಡುತ್ತಿರುವ ಬೋವಿ ಸಮಾಜದ ರೈತರ ಜಮೀನಿಗೆ ಅತಿಕ್ರಮವಾಗಿ ಬೆಂಗಳೂರು ಮೂಲದ ವ್ಯಕ್ತಿ ನಮ್ಮದು ಜಮೀನು ಎಂದು ಪ್ರವೇಶಿಸಿ ಜೆಸಿಬಿ ತಂದು ಕೆಲಸ ಮಾಡುತಿದ್ದಾರೆ ಎಂದು ಪತ್ರಿಕಾಗೋಷ್ಠಿ ಯಲ್ಲಿ ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿಂದ ನಾಯಕ್ ಹಾಗೂ ಸಂತ್ರಸ್ತ ರೈತರು ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಗೋವಿಂದ್ ನಾಯಕ್ ಹಲವು ದಶಕಗಳಿಂದ ಸಾಗುವಳಿ ಭೂಮಿಯ ಮೇಲಿನ ಹಕ್ಕಿಗೆ ಈಗ ಬಂಡವಾಳಶಾಯಿಗಳ ಕಣ್ಣು ಬಿದ್ದಿದ್ದು, ಅಕ್ರಮವಾಗಿ ಒಂಬತ್ತು ಜನ ಬೋವಿ ಸಮಾಜದ ರೈತರು ಸಹಿ ಹಾಕಿದ್ದಾರೆಂದು ಬೆಂಗಳೂರು ಮೂಲದ ವ್ಯಕ್ತಿಯ ಹೆಸರಲ್ಲಿ ಪಹಣಿ ಬರುತ್ತಿದೆ ಅಧಿಕಾರಿಗಳ ಲೋಪದಿಂದ ಅಕ್ರಮವಾಗಿ ಖಾತೆ ನಡೆದಿದೆ ಎಂದು ಅರೋಪಿಸಿದರು.

ಪೊಲೀಸರು ಸಿವಿಲ್ ವಿಚಾರದಲ್ಲಿ ರಕ್ಷಣೆ ನಿಡಬೇಕೆ ಹೊರತು ರಿಯಲ್ ಎಸ್ಟೇಟ್ ಮಧ್ಯವರ್ತಿಗಳ ಕೆಲಸ ಮಾಡಬಾರದು ಬಡವಾಳ ಶಾಯಿಗೆಳು ಜಮೀನು ಬಿಟ್ಟು ಅಷ್ಟೋ ಇಷ್ಟೋ ಹಣ ಪಡೆಯಿರಿ ಎಂದು ಒತ್ತಡ ಹಾಕುತಿದ್ದಾರೆ ಎಂದು ಆರೋಪಿಸಿದರು.

ಅಕ್ರಮವಾಗಿ ಖಾತೆಯಾಗಿದ್ದರೆ ಸಬ್ ರಿಜಿಸ್ಟರ್ ನವರ ಮೇಲೂ ಕ್ರಮ ಹಾಗಬೇಕು, ಸ್ಥಳಕ್ಕೆ ಎಸಿ ರವರು ಬಂದು ಬಡ ವರ್ಗದ ಜನರಿಗೆ ನ್ಯಾಯ ಒದಗಿಸದಿದ್ದರೆ ಅಮರಣಾಂತ ಉಪವಾಸ ಮಾಡುವುದಾಗಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ರಮೇಶ್ ನಾಯಕ. ವೇಣು. ಉಮೇಶ್ ಮಂಗಲ ರತ್ನಮ್ಮ. ನಟರಾಜ್ ಸೇರಿದಂತೆ ಮತ್ತಿತರರಿದ್ದರು.

> ಐವತ್ತು ವರ್ಷದಿಂದ ವ್ಯವಸಾಯ ಮಾಡುತಿದ್ದೇವೆ ಈಗ ಏಕಾಏಕಿ ಬಂದು ನಮ್ಮ ಹೆಸರಲ್ಲಿ ಆರ್ ಟಿಸಿ ಇದೆ ನಮ್ಮ ಜಾಗ ಎಂದು ಜೆಸಿಬಿ ತಂದು ಕೆಲಸ ಮಾಡುತಿದ್ದಾರೆ ನಮ್ಮ ವಿರುದ್ದವೇ ಪೊಲೀಸರಿಗೆ ದೂರು ನೀಡಿದ್ದು ನಮಗೆ ನ್ಯಾಯ ಸಿಗದಿದ್ದರೆ ಹೋರಾಟ ಸಿದ್ದ ನಾಯ್ಯ ಸಿಗದಿದ್ದರೆ ಸಾಯುವುದಕ್ಕೂ ಸಿದ್ದ.
>
> **ರತ್ನಮ್ಮ** ಸಂತ್ರಸ್ತ ರೈತ ಮಹಿಳೆ

# ಕೇಂದ್ರ ಸರ್ಕಾರ ವಿರುದ್ಧ ಕೈ ಪ್ರತಿಭಟನೆ: ಬಂಧನ

## ಬಿಜೆಪಿಗೆ ಕಚೇರಿಗೆ ಮುತ್ತಿಗೆ ಯತ್ನವನ್ನು ವಿಫಲಗೊಳಿಸಿದ ಪೊಲೀಸರು

ಚಾಮರಾಜನಗರ: ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರದ ದ್ವೇಷ ರಾಜಕಾರಣ ಹಾಗೂ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಉದ್ದೇಶ ಪೂರ್ವವಾಗಿ ಸೋನಿಯಾಗಾಂಧಿ, ರಾಹುಲ್‌ಗಾಂಧಿ ಅವರ ಹೆಸರನ್ನು ಸೇರಿಸಿ ಅಧಿಕಾರ ದುರಪಯೋಗಪಡಿಸಿ ಕೊಂಡಿರುವುದನ್ನು ವಿರೋಧಿಸಿ ನಗರದಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆದು, ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ 100ಕ್ಕು ಹೆಚ್ಚು ಮಂದಿಯನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದ ಪ್ರಸಂಗ ನಡೆಯಿತು.

ನಗರದ ರಾಮಸಮುದ್ರಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಮತ್ತು ಮುಖಂಡರು ಹೂವಿನ ಹಾರ ಹಾಕಿದರು. ಬಳಿಕ ಬಿಜೆಪಿ ಸರ್ಕಾರ ವಿರುದ್ಧ ಘೋಷಣೆ ಕೂಗಿ ಕಾಂಗ್ರೆಸ್ ಬಾವುಟ ಹಿಡಿದು ಬಿಜೆಪಿ ಕಚೇರಿಯತ್ತ ಧಾವಿಸಿದರು.

**ಪೊಲೀಸರಿಂದ ಬಂಧನ**

ನಗರದ ರಾಮಸಮುದ್ರ ರಸ್ತೆಯ ಕುಲುಮೆ ರಸ್ತೆ ಮಾರ್ಗದ ಬಳಿ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಜಮಾ ಯಿಸಿ, ಬ್ಯಾರಿಕೇಡ್‌ಗಳನ್ನು ಹಾಕಿ, ಪ್ರತಿಭಟನಾಕಾರನ್ನು ಮಾರ್ಗ ಮಧ್ಯೆದಲ್ಲಿಯೇ ತಡೆದರು. ಇದರಿಂದ ಪೊಲೀಸರು ಮತ್ತು ಪ್ರತಿಭಟನಾಕಾರ ನಡುವೆ ವಾಗ್ವಾದ ಹಾಗೂ ತಳ್ಳಾಟ,



ನೂಕಾಟ ನಡೆಯಿತು. ಅಂತಿಮವಾಗಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪೊಲೀಸರ ಬ್ಯಾರಿಕೇಟ್ ತೆಗೆದು ಮುನ್ನಗ್ಗಲು ಯತ್ನಿಸಿದರು. ಎಎಸ್ಪಿ ಶಶಿಧರ್, ಡಿವೈಎಸ್ಪಿ ಸೇಹಾರಾಜ್ ನೇತೃತ್ವದ ಪೊಲೀಸರ ತಂಡ ಪ್ರತಿಭಟನಾಕಾರನ್ನು ಬಂಧಿಸಿ, ನಂತರ ಬಿಡುಗಡೆಗೊಳಿಸಿದರು. ಇದಕ್ಕು ಮುನ್ನಾ ಮಾತನಾಡಿದ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ನಮ್ಮ ಪಕ್ಷದ ಅಧಿನಾಯಕಿ ಸೋನಿಯಾಗಾಂಧಿ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸಿಲುಕಿಸಿ ಅವರ ವಿರುದ್ಧ ನ್ಯಾಯಾಲದಯಲ್ಲಿ ಧಾವೆ ಹೂಡಿ ತಪ್ಪಿಸ್ಥರು ಎಂಬಂತೆ ಬಿಂಬಿಸಲು ಸಂಚು ರೂಪಿಸಿತ್ತು. ಅದರೆ ನ್ಯಾಯಾಲಯ ಈ ಪ್ರಕರಣಕ್ಕೆ ತಡೆ ನೀಡುವ ಜೊತೆಗೆ ನಿರ್ದೋಷಿ ಗಳು ಎಂದು ತೀರ್ಪು ನೀಡಿದೆ. ಇದು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ಕೈವಾಡ ಮತ್ತು ಸಂಚು ಎಂಬುವುದು ಸಾಬೀತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಹೆಸರನ್ನು ಬದಲಿಸುವ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮ ಗಾಂಧಿ ಅವರಿಗೆ ಅಪಮಾನ ಮಾಡಿದೆ. ರಾಷ್ಟ್ರಪಿತನಿಗೆ ಅಪಮಾನ ಮಾಡಿದೆ. ಹೇ ರಾಮ್ ಜೀ ಎಂದು ಬದಲಾಯಿಸುವ ಮೂಲಕ ರಾಷ್ಟ್ರಪತಿಗೆ ಅಪಮಾನ ಮಾಡಿದೆ. ಇದರಿಂದ ವಿರುದ್ಧ ದೇಶದ ಜನರು ಪ್ರತಿಭಟನೆ ಮಾಡಬೇಕು ಎಂದು ಕರೆ ನೀಡಿದರು.

ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್ ಮಾತನಾಡಿ, ದೇಶದ್ಯಂತ ಬಿಜೆಪಿ ಅವರು ದ್ವೇಷದ ರಾಜಕಾರಣ ಮಾಡುತ್ತಿದೆ. ಇದನ್ನು ಖಂಡಿಸಿ, ಬಿಜೆಪಿ ಕಚೇರಿಗಳಿಗೆ ಮುತ್ತಿಗೆ ಹಾಕು ಚಳವಳಿಯನ್ನು ಹಮ್ಮಿಕೊಂಡಿದ್ದೇವೆ.ಇದಕ್ಕ ಪೋಲಿಸರು ನಮಗೆ ಅವಕಾಶ ಮಾಡಿಕೊಡಬೇಕು. ನಾವೆಲ್ಲರು ಗಾಂಧಿ ಅನುಯಾಯಿಗಳು ಶಾಂತಿ ಪ್ರಿಯರು, ಶಾಂತಿ ಮಾರ್ಗದಲ್ಲಿ ಪ್ರತಿಭಟನೆ ಮಾಡುತ್ತಿವೆ. ಪ್ರತಿಭಟನೆಯನ್ನು ಹತ್ತಿಕ್ಕುವ ಕೆಲಸವನ್ನು ಪೊಲೀಸರು ಮಾಡುತ್ತಿದ್ದಾರೆ. ಕೇಂದ್ರ ಬಿಜೆಪಿ ಸರ್ಕಾರದ ಕೈಗೊಂಬೆಯಾಗಿದ್ದಾರೆ ಎಂದು ದೂರಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆರ್.ಮಹದೇವ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್, ಕೊಳ್ಳೇಗಾಲ ತೋಟೇಶ್, ಹೊಂಗನೂರು ಚಂದ್ರು, ಪ್ರಭುಪ್ರಸಾದ್, ಮಹಿಳಾ ಘಟಕದ ಅಧ್ಯಕ್ಷೆ ಕೆಂಗಾಕಿ ನಾಗರತ್ನ, ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ಮೋಹನ್ ನಗು, ಗೌಡಹಳ್ಳಿ ರಾಜೇಶ್, ಕಂದಹಳ್ಳೀ ನಂಜುಂಡಸ್ವಾಮಿ, ಕಲಾವತಿ, ಚಿನ್ನಮ್ಮ, ಪದ್ಮ ಪುರುಷೋತ್ತಮ್, ಕರಿನಂಜನಪುರ ಸ್ವಾಮಿ, ರವಿಗೌಡ, ಹೆಬ್ಬಸೂರು ರಂಗಸ್ವಾಮಿ, ಚೇತನ್ ಕುಮಾರ್, ರವಿಕುಮಾರ್, ಸಿದ್ದಯ್ಯನಪುರ ಶಿವರಾಜು, ಗೋವಿಂದರಾಜು, ಕೆರಹಳ್ಳಿ ರೇವಣ್ಣ, ಬಿಸಲವಾಡಿ ರವಿ, ಮದುವನಹಳ್ಳೀ ನಂಜುಂಡಸ್ವಾಮಿ, ಸೋಮಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮೇಶ್ ಮೊದಲಾದವರು ಹಾಜರಿದ್ದರು.

## ಇಂದು ಮಿಸ್ಟರ್ ಗುಂಡ್ಲುಪೇಟೆ ದೇಹಧಾರ್ಢ್ಯ ಸ್ಪರ್ಧೆ

ಗುಂಡ್ಲುಪೇಟೆ: ಶ್ರೀ ಹನುಮಾನ್ ಗೋಲ್ಡ್ ಜಿಮ್ ಬೇಗೂರು ಮೈಸೂರು ಜಿಲ್ಲಾ ದೇಹಧಾರ್ಢ್ಯ ಫುಟ್ ನೆಸ್ ಸಂಸ್ಥೆಯ ಸಹಯೋಗದೊಂದಿಗೆ ಶನಿವಾರ ಮಧ್ಯಾಹ್ನ 3.00 ಗಂಟೆಗೆ ಪಟ್ಟಣದ ಹಳೆಯ ಬಸ್ ಸ್ಯಾಂಡ್ ಅವರಣದಲ್ಲಿ ನಡೆಯಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ಮೊಟ್ಟಮೊದಲ ಭಾರಿಗೆ " ಮಿಸ್ಟರ್ ಗುಂಡ್ಲುಪೇಟೆ ಅಂತರ್ ಜಿಲ್ಲಾ ಮಟ್ಟದ ದೇಹಧಾರ್ಢ್ಯ ಸ್ಪರ್ಧೆ– 2025 ನಡೆಯಲಿದ್ದು ಚಾಮರಾಜನಗರ, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಕೊಡಗು, ಹಾಸನ ಭಾಗದಿಂದ ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಮೊದಲ ಬಹುಮಾನ 25000/–, ಎರಡನೇ ಬಹುಮಾನ 20000/–ಮೂರನೇ ಬಹುಮಾನ 15000/– ಆಯೋಜಕರು ಸಾಗರ್ ಅಗತಗೌಡನಹಳ್ಳಿ, ಸುದ್ದು (ಸುಧಾಮ), ಪ್ರವೇಶ ಶುಲ್ಕ 500/– ರೂಗಳು, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಸಾಗರ್:– 7353562950

## ಬೈಕ್ ಡಿಕ್ಕಿ: ಪಾದಚಾರಿ ಸಾವು

ಚಾಮರಾಜನಗರ, ಬೈಕ್ ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಸೋಮವಾರಪೇಟೆ ಬಳಿ ಸಂಭವಿಸಿದೆ.

ಸೋಮವಾರಪೇಟೆಯ ನಿವಾಸಿ ನಂಜುಂಡಯ್ಯ (60) ಮೃತ ಪಾದಚಾರಿ. ಸೋಮವಾರಪೇಟೆಯ ರಸ್ತೆಯಲ್ಲಿ ಅಪರಿಚಿತ ಬೈಕ್ ಸವಾರ ರಸ್ತೆ ದಾಟುತ್ತಿದ್ದ ಪಾದಚಾರಿಗೆ ಡಿಕ್ಕಿ ಹೊಡೆದು ಸ್ಥಳದಲ್ಲೇ ಪಾದಚಾರಿ ಮೃತಪಟ್ಟಿದ್ದನು.

ವಿಷಯ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಮೃತ ದೇಹವನ್ನು ನಗರದ ಸಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ.

ಡಿಕ್ಕಿ ಹೊಡೆದ ಬೈಕ್ ಸವಾರ ಅಪರಿಚಿತನಾಗಿದ್ದು, ಆತನಿಗೂ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈ ಸಂಬಂಧ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮತ್ತೆ ಕಾಂಗ್ರೆಸ್‌ಗೆ ಮರಳಿದ ಎಂ.ನರಸಿಂಹಮೂರ್ತಿ

ರಾಮನಗರ: ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದ್ದ ಎಂ.ನರಸಿಂಹ ಮೂರ್ತಿ (ಬಸವನಪುರ) ಮತ್ತೆ ಕಾಂಗ್ರೆಸ್‌ಗೆ ಮರಳಿದ್ದಾರೆ.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್ ಅವರನ್ನು ಭೇಟಿಯಾದ ಅವರು ಡಿಕೆಸು ಅವರ 60ನೇ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದರು. ತದನಂತರ ಅವರ ಸಮ್ಮುಖದಲ್ಲಿ ನರಸಿಂಹ ಮೂರ್ತಿಯವರು ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಪಕ್ಷ ಸೇರಿದ್ದಾರೆ. ಮನೆಗೆ ಮರಳಿದ ನರಸಿಂಹಮೂರ್ತಿಯವರನ್ನು ಅವರನ್ನು ಮಾಜಿ ಸಂಸದರು ಹೂಗುಚ್ಛ ನೀಡಿ ಪಕ್ಷಕ್ಕೆ ಸ್ವಾಗತಿಸಿದ್ದಾರೆ. ಬಸವನಪುರ ಮೂರ್ತಿ ಅಂತಲೇ



ಜನರಿಗೆ ಪರಿಚಯವಾಗಿರುವ ಇವರು ಕೆಲವು ತಿಂಗಲೂಗಳ ಹಿಂದೆಯಷ್ಟೆ ಕಾಂಗ್ರೆಸ್ ಪಕ್ಷ ತೊರೆದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ಜಾತ್ಯಾತೀತ ಜನತಾದಳ ಸೇರ್ಪಡೆಯಾಗಿದ್ದರು. ಇದೀಗ ಇವರು ಕಾಂಗ್ರೆಸ್‌ಗೆ ಮರಳಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಭಾಷೆ ಗಾಂಭೀರ್ಯ, ಮಹತ್ವ ಕಳೆದುಕೊಳ್ಳುತ್ತಿದೆ

## ಮಾಜಿ ಸ್ಪೀಕರ್ ರಮೇಶ್ ಕುಮಾರ್ ಬೇಸರ | ಪ್ರೊ.ಎಂ.ಕೃಷ್ಣೇಗೌಡರ 4 ಕೃತಿಗಳ ಲೋಕಾರ್ಪಣೆ

**ಮೈಸೂರು:** ಇತ್ತೀಚಿನ ದಿನಗಳಲ್ಲಿ ಭಾಷೆಯ ಗಾಂಭೀರ್ಯತೆ, ಮಹತ್ವ ಹಾಗೂ ಗೌರವವನ್ನು ಕಳೆದುಕೊಳ್ಳುತ್ತಿದ್ದು, ಕೆಲವರು ನಾವೇ ಪಂಡಿತರು, ಅದು ನಮ್ಮ ಹಕ್ಕು ಎಂದು ಎಂದುಕೊಳ್ಳುತ್ತಾರೆ ಎಂದು ಕರ್ನಾಟಕ ವಿಧಾನಸಭೆ ಮಾಜಿ ಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ವಿಷಾದ ವ್ಯಕ್ತಪಡಿಸಿದರು.

ಅನಿಕೇತನ ಸೇವಾ ಟ್ರಸ್ಟ್, ವಿಸ್ಮಯ ಬುಕ್ ಹೌಸ್ ವತಿಯಿಂದ ನಗರದ ಬೋಗಾದಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಅವರ 'ಹೊಳೆಯ ಮರಳು, ಹೊಂಗೆಯ ನೆರಳು, ಯಾಲಕ್ಕಿಗೊನೆ, ಅವರೆಯ ಸೊನೆ' ಕೃತಿಗಳನ್ನು ಬಿಡುಗಡೆಗೊಳಿಸಿ, ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಾಣಿಗಳಿಗೆ ಯಾವುದೇ ಭಾಷೆ ಇಲ್ಲ, ಆದರೆ ನಾವುಗಳು ಭಾಷೆಗಿದ್ದ ಗೌರವವನ್ನು ಕಳೆದಿದ್ದೇವೆ. ನಾನು ಆರು ಬಾರಿ ಚುನಾವಣೆಯಲ್ಲಿ ಗೆದ್ದಿದ್ದೇನೆ. ದೇಶದ ಜನರು ಜಾತಿವಾದಿಗಳಾದರೆ ನಾನು ಗೆಲ್ಲುವಂತಿಲ್ಲ. ಆದರೆ ಭಾಷೆ ನನ್ನನ್ನು ಗೆಲ್ಲಿಸಿದೆ. ಮನಸ್ಸಿಗೂ ಒಂದೂ ಭಾಷೆ ಇದೆ. ಯಾವ ಮನಸ್ಸಿಗೆ ಮೂಕ ಭಾಷೆಗಳು ಕಿವಿ ಇರುತ್ತದೆ, ಅದನ್ನು ನಾವು ಮುಟ್ಟಬೇಕಿದೆ ಎಂದ ಅವರು, ನಮ್ಮದು ಗಡಿನಾಡು, ಕನ್ನಡವನ್ನು ತೆಲುಗನಲ್ಲಿ ಪಾಠ ಮಾಡಿದರು. ಆದರೆ ಸರ್ಕಾರಿ ಕೆಲಸ ಸೇರುವ ಮನಸ್ಥಿತಿ ಹಾಗೂ ಇಂಗ್ಲಿಷ್ ಮಾಧ್ಯಮ ಓದಿಗಾಗಿ ಸಂಸ್ಕೃತ ಓದಿದೆ ಎಂದರು.

ಹಂಗು ಅನಿವಾರ್ಯದ ವಿಚಾರವಾಗಿದ್ದು, ಹಂಗಿಲ್ಲದವರನ್ನು ನೋಡದಿರುವುದೇ ಕಷ್ಟಕರವಾಗಿದೆ. ಇತ್ತೀಚೆಗೆ ಸಾರ್ವಜನಿಕರಲ್ಲಿ ಸಿಟ್ಟಿನ ಅಭಾವವಿದ್ದು, ಸಾರ್ವಜನಿಕ ಲಜ್ಜೆಯ ಅಭಾವ ಕಾಡುತ್ತಿದೆ. ನಮ್ಮ ಆತ್ಮ ವಂಚನೆಗಳಿಗೆ ಹೆದರಿ, ಕೃತಕ ನಡವಳಿಕೆಗೆ ಆಸ್ಪದ ಕೊಡುತ್ತೇವೆ, ಆ ಮೂಲಕವಾಗಿ ಸುಳ್ಳನ್ನು ಸತ್ಯವಾಗಿ ಮಾಡುವ ಪ್ರಯತ್ನಗಳು ಹಾಸು ಹೊಕ್ಕಾಗಿದೆ ಎಂದು ಹೇಳಿದರು.

ನಮ್ಮಲ್ಲಿ ಜಾತಿವಾದ ಬೇರೂರಿದೆ. ಎಲ್ಲರೂ ಆಯಾ ಸಮುದಾಯದವರನ್ನು ಗೆಲ್ಲಿಸುತ್ತಾರೆ ಎಂಬ ಭಾವನೆ ಇದೆ. ಆದರೆ ಈ ರೀತಿಯ ಮನೋಭಾವ ವಿದ್ದರೆ ನಾನು ಆರು ಬಾರಿ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ನನ್ನನ್ನು ಗೆಲ್ಲಿಸಿರುವುದು ನನ್ನ



### ಅತ್ಯಂತ ವಿಶೇಷ ವ್ಯಕ್ತಿತ್ವ

ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹಿರಿಯ ಸಾಹಿತಿ ಕೆ.ವಿ. ಶಿವಪ್ಪ ಅವರು ಮಾತನಾಡಿ, ಪ್ರೊ.ಎಂ. ಕೃಷ್ಣೇಗೌಡ ಅವರು ಕನ್ನಡದ ಕಂಪು, ಸಾಂಸ್ಕೃತಿಕ ಹಿರಿಮೆಯನ್ನು ವಿಶ್ವದೆಲ್ಲೆಡೆ ಪಸರಿಸುತ್ತಾ, ಕನ್ನಡ ಭಾಷೆಯ ಸೊಗಡನ್ನು ಎಲ್ಲೆಡೆ ಹರಡಿದ್ದಾರೆ. ಕೃಷ್ಣೇಗೌಡ ಅವರು ಅತ್ಯಂತ ವಿಶೇಷ ವ್ಯಕ್ತಿತ್ವ ಹೊಂದಿದ್ದು, ಅವರ ಗುಣವನ್ನು ಗಮನಿಸಿದರೆ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿದೆ. ತಮ್ಮ ಆತ್ಮಾಭಿಮಾನ, ಪ್ರೀತಿ ಮತ್ತು ವಿಶ್ವಾಸದೊಂದಿಗೆ ಕೃಷ್ಣೇಗೌಡರು ಎಲ್ಲರ ಜತೆಗೆ ಬರೆಯುವ ಗುಣವನ್ನು ಹೊಂದಿದ್ದು, ಹಮ್ಮು–ಬಿಮ್ಮು ಇಲ್ಲದೆ ಎಲ್ಲರ ಜೊತೆಗೂ ಬರೆಯುವ ಕೃಷ್ಣೇಗೌಡರು, ತಮ್ಮ ಅಗಾಧ ಭಾಷಾ ಶೈಲಿಯಿಂದ ಎಲ್ಲರನ್ನು ಮೋಡಿ ಮಾಡಿದ್ದಾರೆ. ಶಿಸ್ತಿಗೆ ಬೆಲೆ ಕೊಟ್ಟ, ಸ್ವಾಭಿಮಾನದ ಬದುಕು ಸಾಗಿಸುತ್ತಿದ್ದಾರೆ. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರಾಗಿ ತಮ್ಮ ವೃತ್ತಿ ಜೀವನದಲ್ಲಿ ಕಪ್ಪುಚುಕ್ಕೆ ಇಲ್ಲದಂತೆ ಕಾರ್ಯನಿರ್ವಹಿಸಿದ್ದಾರೆ ಎಂದರು.

ಹೃದಯ ತುಂಬಿರುವ ಭಾಷೆಯೇ ಆಗಿದೆ. ನನ್ನ ಭಾಷೆ ನನ್ನ ವ್ಯಕ್ತಿತ್ವದ ಪ್ರತಿಬಿಂಬವಾಗಿದೆ. ಅದು ಜನರ ಮನಸ್ಸಿನಲ್ಲಿ ನನಗೆ ಜಾಗ ಕೊಡಿಸಿದೆ. ಇಷ್ಟು ಪರಿಣಾಮಕಾರಿಯಾದ ಭಾಷೆಗೆ ಇರುವ ಗೌರವವನ್ನು ಉಳಿಸಿಕೊಳ್ಳಬೇಕಿದೆ ಎಂದುರು.

ಕಾರ್ಯಕ್ರಮಕ್ಕೆ ಬರುವಾಗ ಹೋಟೆಲ್‌ವೊಂದರಲ್ಲಿ ಚಹಾ ಕುಡುಯುವಾಗ ಮಹಿಳೆಯೊಬ್ಬರು ನನ್ನನ್ನು ಕಂಡು ಭಾವುಕರಾದರು. ಏಕೆ ಎಂದು ಕೇಳಿದಾಗ ಆಕೆ ನೀವು ಕೋಪ ಇರಬಾರದು. ಕೋಪಿಷ್ಟರ ಮನೆ ನರಕವಾಗುತ್ತದೆ ಎಂದು ಹೇಳಿದ್ದನ್ನು ನೆನಪಿಸಿಕೊಂಡರು. ಆಗ ನಾನೂ ಕೂಡ ಕೋಪಿಷ್ಟನೇ ಎಂಬುದನ್ನು ನೆನಪಿಸಿತು. ಅದರಿಂದ ಸತ್ತ ನನ್ನ ಹೆಂಡತಿ ಎಷ್ಟು ಅನುಭವಿಸಿರಬೇಕೆಂದು ಭಾವುಕನಾದೆ. ಆದರೆ ನನ್ನೊಳಗಿನ ಪ್ರಜ್ಞೆ ಮಾತನಾಡಿತು. ವ್ಯಕ್ತಿಗೆ ಸಿಟ್ಟು ಇರಬಾರದು ನಿಜ. ಆದರೆ ಮಾಜದಲ್ಲಿನ ತಪ್ಪುಗಳ ವಿರುದ್ಧ ಸಾರ್ವಜನಿಕ ಸಿಟ್ಟಿ ಅಭಾವ ಇದೆ ಎಂಬುದನ್ನು ಸಾರಿ ಹೇಳಿತು. ಅಲ್ಲದೇ ಸಾರ್ವಜನಿಕ ಲಜ್ಜೆಯ ಅಭಾವವೂ ಕಾಡುತ್ತಿದೆ ಎಂಬುದನ್ನು ತಿಳಿಸಿತು ಎಂದರು.

ಹೊಳೆಯ ಮರಳು, ಹೊಂಗೆ ನೆರಳು, ಅವರೆ ಸೊನೆ, ಏಲಕ್ಕಿ ಗೊನೆ ಕೃತಿಗಳು ತಮ್ಮೂರಿನೊಟ್ಟಿಗೆ ಹೊಂದಿರುವ ನಂಟನ್ನು ಸಾರಿ ಹೇಳುತ್ತವೆ. ಅವರು ಆ ಗ್ರಾಮ್ಯ ಸೊಗಡಿನೊಂದಿಗೆ ಕಡೆವರೆಗೂ ಇರಬೇಕು. ಅದೇ ಅವರಿಗೆ ಗೌರವ ಎಂದರು.

**ಸಾಂಸ್ಕೃತಿಕ ರಾಯಾಭಾರಿ:** ಕೃತಿಗಳ ಕುರಿತು ಮಾತನಾಡಿದ ಭಾಷಾ ಸಂಸ್ಥಾನ ಮೈಸೂರು, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ತಳವಾರ, ನಾನು ಗ್ರಾಮೀಣ ಮನೋಧರ್ಮದಿಂದ ಬಂದವನಾಗಿದ್ದೇನೆ. ಪ್ರೊ.ಕೃಷ್ಣೇಗೌಡ ಕರ್ನಾಟಕ ಪ್ರಮುಖ ಸಾಂಸ್ಕೃತಿಕ ರಾಯಾಭಾರಿಗಳಲ್ಲಿ ಒಬ್ಬರು. ಪ್ರಪಂಚದ ಹಲವು ದೇಶಗಳಿಗೆ ಪ್ರವಾಸ ಮಾಡಿ ತಾವು ಕಲಿತ ವಾಕ್ ವೈಭವವನ್ನು ಪ್ರಸಾರ ಮಾಡಿದ್ದಾರೆ. ಅವರು ಆಡುವ ಮಾತು ಆಕರ್ಷಕ ಮಾತ್ರವಲ್ಲ, ಮೌಲ್ವಿಕವೂ ಆಗಿರುತ್ತದೆ. ಅವರ ಬರವಣಿಗೆಯೂ ಸೃಜನಶೀಲ, ಸತ್ವಪೂರ್ಣವಾಗಿದೆ. ಯಾಲಕ್ಕಿಯ ಗೊನೆ ಬಾಗಿ ಹಾಲು ಸೂಸಿದಾವೋ ಎಂಬ ಜನಪದದ ತ್ರಿಪದಿಯಂತೆ ಅವರ ಹೃದಯ ಶ್ರೀಮಂತಿಕೆಯಾಗಿದೆ. ಗ್ರಾಮೀಣ ಅನುಭವ, ಕನ್ನಡ ಪ್ರೇಮ, ಸೃಜಶೀಲ ಅಭಿವ್ಯಕ್ತಿ ಕ್ರಮ, ಮಾಹಿತಿ ಪೂರ್ಣ ಬರವಣಿಗೆಯಿದೆ. ಈ ವಿಭಾಗ ಕ್ರಮ ಅಧ್ಯಯನ ಅನೂಕೂಲತೆಗೆ ಮಾತ್ರ ಸಿಗಬಲ್ಲವು. ಈ ನಾಲ್ಕು ಕೃತಿಗಳು ಸೇರಿ ಒಂದು ಸಾವಯವ ಬೆಲ್ಲದ ಹಂಚಿನಂತಾಗಿದೆ. ಅಮ್ಮನ ಕೈ ತುತ್ತು, ಅಪ್ಪನ ಹೆಗಲು, ಹೆಂಡತಿಯ ಮುತ್ತು, ತಂಗಳನ್ನ, ರಾಗಿ ಮುದ್ದೆ ಹುಚ್ಚೇಳು ಕಾರ, ಹೊಂಗೆ ಮರದ ತಂಪು, ಕುವೆಂಪು, ಬೇಂದ್ರೆ ಕಾಲದ ಪದ್ಯ ಹೀಗೆ ಮೊದಲಾದವುಗಳನ್ನೂ ಸೇರಿ ತಾವು ಹಾಡಿ ಬೆಳೆದ ಮರೆಯದೆ ಉಲ್ಲೇಖಿಸಿದ್ದಾರೆ ಎಂದರು.

ಸಮಾರಂಭದಲ್ಲಿ ಖ್ಯಾತ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಸಾಹಿತಿ, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಮುಖ್ಯಸ್ಥ ಕೆ.ವಿ. ಮಲ್ಲೇಶ್ ಸೇರಿದಂತೆ ಇತರರಿದ್ದರು.

### ಸಾಧಕರಿಗೆ ಸನ್ಮಾನ

ಸಮಾರಂಭದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಕೆ.ವಿ. ಶ್ರೀಧರ್, ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಆರ್ ಶಿವಕುಮಾರ್, ಶ್ರೀ ಕಾಲಭೈರವೇಶ್ವರ ಕನ್‌ಸ್ಟ್ರಕ್ಷನ್ಸ್ ಮಾಲೀಕ ಕಡಕೊಳ ಕುಮಾರ್, ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ರಮೇಶ್ ಅವರುಗಳನ್ನು ಅಭಿನಂದಿಸಲಾಯಿತು.





## ಡೀನ್ ಡಾ. ಮಂಜುನಾಥ್ ಹೇಳಿಕೆ | ಚಾ.ನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಇಎನ್‌ಟಿ ವಿಭಾಗದ ಹ್ಯಾಂಡ್ಸ್–ಆನ್ ಕ್ಯಾಡವರಿಕ್ ಲಾಲಗ್ರಂಥಿ ಡಿಸೆಕ್ಷನ್ ಕಾರ್ಯಾಗಾರ

# ಆರೋಗ್ಯ ಸೇವೆಯನ್ನು ಪರಿಣಾಕಾರಿಯಾಗಿ ನೀಡಲು ಕಾರ್ಯಾಗಾರ ಸಹಕಾರಿ

ಚಾಮರಾಜನಗರ, ಹಿಂದುಳಿದ ಗಡಿ ಜಿಲ್ಲೆಯಲ್ಲಿ ಉತ್ತಮ ಆರೋಗ್ಯ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಇಂಥ ಕಾರ್ಯಾಗಾರಗಳು ವೈದ್ಯರ ವೃತ್ತಿ ಕೌಶಲ್ಯವನ್ನು ವೃದ್ಧಿಸುತ್ತಿದೆ. ಜೊತೆಗೆ ರೋಗಿ ಗುಣಮುಖರಾಗಿ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ. ಎಚ್.ಜಿ. ಮಂಜುನಾಥ್ ತಿಳಿಸಿದರು.

ನಗರದ ಹೊರ ವಲಯದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಇಎನ್‌ಟಿ ವಿಭಾಗದ ವತಿಯಿಂದ ಎಸ್.ಎ.ಎಲ್.ಐ–ಇಎನ್‌ಟಿ ಸಿಮ್ಸ್ –2025 ಒಂದು ದಿನದ ಹ್ಯಾಂಡ್ಸ್–ಆನ್ ಕ್ಯಾಡವರಿಕ್ ಲಾಲಗ್ರಂಥಿ ಡಿಸೆಕ್ಷನ್ ಕಾರ್ಯಾಗಾರ ಮತ್ತು ಸಿಎಂಇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚಾಮರಾಜನಗರ ಜಿಲ್ಲೆ ಸೇರಿದಂತೆ ನಮ್ಮ ರಾಜ್ಯದಲ್ಲಿ 33 ಸರ್ಕಾರಿ ವೈದ್ಯಕೀಯ ಕಾಲೇಜುಗಳಿವೆ. ಈ ಪೈಕಿ ನಮ್ಮ ಸಂಸ್ಥೆಯು ಬಹಳ ಉತ್ತಮವಾಗಿ




ಕಾರ್ಯನಿರ್ವಹಣೆ ಮಾಡಿ ಪ್ರಶಂಸೆಗೆ ಪಾತ್ರವಾಗಿದೆ. ಇದಕ್ಕೆ ಎಲ್ಲಾ ವಿಭಾಗದಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರ ತಂಡ ಕಾರಣವಾಗಿದೆ. ಆಯಾ ಮುಖ್ಯಸ್ಥರು ಉತ್ತಮ ತಂಡವನ್ನು ರಚನೆ ಮಾಡಿಕೊಂಡು ಅಸ್ಪತ್ರೆಗೆ ಬರುವವರಿಗೆ ಗುಣಮಟ್ಟದ ಸೇವೆಯನ್ನು ನೀಡುತ್ತಿದ್ದಾರೆ. ಇದರೊಟ್ಟಿಗೆ ಇಂಥ ಕಾರ್ಯಾಗಾರಗಳ ಮೂಲಕ ವೈದ್ಯರು ಇನ್ನು ಹೆಚ್ಚಿನ ಪರಿಣತಿಯನ್ನು ಹೊಂದಿ,ಗುಣಮಟ್ಟದ ಆರೋಗ್ಯ ಸೇವೆ ನೀಡಲು ಸಹಕಾರಿಯಾಗಿದೆ ಎಂದರು.

ಈ ಕಾರ್ಯಾಗಾರಕ್ಕೆ ದಕ್ಷಿಣ ಭಾರತ ರಾಜ್ಯಗಳಿಂದ ವಿಭಾಗದ ಮುಖ್ಯ ವೈದ್ಯಾಧಿಕಾರಿಗಳು ಆಗಮಿಸಿರುವುದು ನಮ್ಮ ಹೆಮ್ಮೆ. ಹಿಂದುಳಿದ ಗಡಿ ಜಿಲ್ಲೆಯಲ್ಲಿ ಆರ್ಥಿಕತೆ ಕಡಿಮೆ ಇದೆ. ಇಂಥವರಿಗೆ ಉತ್ತಮ ಆರೋಗ್ಯ ಸೇವೆ ನೀಡುವುದು ನಮ್ಮ ಮೊದಲ ಅಧ್ಯತೆಯಾಗಬೇಕು. ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ಮಂಜುನಾಥ್ ತಿಳಿಸಿದರು.

ಇಎನ್‌ಟಿ ವಿಭಾಗದ ಹಿರಿಯ ತಜ್ಞರಾದ ಡಾ. ಎಸ್. ಬಸವರಾಜ್ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಮೂಗು, ಕಿವಿ, ಗಂಟಲು ಪ್ರಮುಖ ಅಂಗವಾಗಿದ್ದು, ಚಿಕಿತ್ಸೆ ನೀಡಲು ಪರಿಪಕ್ವತೆ ಮುಖ್ಯವಾಗಿರುತ್ತದೆ. ಬಾಯಿ, ಗಂಟಲು ಕ್ಯಾನರ್ ಅನ್ನು ಗುಣಪಡಿಸಲು ಶಸ್ತ್ರ ಚಿಕಿತ್ಸೆ ಅಗತ್ಯವಿರುತ್ತದೆ. ಇಂಥ ಸಂದರ್ಭದಲ್ಲಿ ಬಹಳ ಜೋಪಾನವಾಗಿ, ವಿವಿಧ ಭಾಗದಲ್ಲಿರುವ ನರಗಳ ಬಗ್ಗೆ ತಿಳಿದುಕೊಂಡು ಕ್ಯಾನ್ಸರ್ಗೆ ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತದೆ. ಸ್ವಲ್ಪ ಮೈಮರೆತರು ಸಹ ರೋಗಿಯ ನರಗಳು ಬ್ಲಾಕ್ ಅಗುವು ಸಾಧ್ಯತೆಗಳು ಹೆಚ್ಚು. ಹೀಗಾಗಿ ಇಂಥ ಕಾರ್ಯಾಗಾರದ ಮೂಲಕ ವೈದ್ಯರಿಗೆ ಪ್ರಾತ್ಯಕ್ಷಿತೆ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗುತ್ತದೆ. ಜೊತೆಗೆ ಅವರು ನೇರವಾಗಿ ಅತ್ಮವಿಶ್ವಾಸದಿಂದ ಅಪರೇಷನ್ ಮಾಡುವ ವಿಧಾನಗಳನ್ನು ಹೇಳಿಕೊಡಲಾಗುತ್ತದೆ ಎಂದರು.

ಕಾರ್ಯಾಗಾರದ ಸಂಯೋಜಕರಾದ ಇಎನ್‌ಟಿ ತಜ್ಞ ವೈದ್ಯರಾದ ಡಾ. ಎಂ.ಎ. ಷರೀಫ್ ಮಾತನಾಡಿ, ಲಾಲಗ್ರಂಥಿ ಸಂಬಂಧಿತ ರೋಗಗಳು, ವಿಶೇಷವಾಗಿ ಕ್ಯಾನ್ಸರ್ನಲ್ಲಿ ಶಸ್ತ್ರಚಿಕಿತ್ಸೆ ಅವಶ್ಯಕವಾಗಿರುತ್ತವೆ. ಈ ಶಸ್ತ್ರಚಿಕಿತ್ಸೆಗಳಲ್ಲಿ ಮುಖೇನ ಪ್ರಮುಖ ರಕ್ತನಾಳಗಳು ಮತ್ತು ಅನೇಕ ಜೀವಾಳ ರಚನೆಗಳು ಇರುವುದರಿಂದ, ಸೂಕ್ತ ತರಬೇತಿ ಮತ್ತು ನೈಪುಣ್ಯ ಅತ್ಯಂತ ಅಗತ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಅಜಯ್ ಕೆ.ಟಿ., ವೈದ್ಯಕೀಯ ಅಧೀಕ್ಷಕರಾದ ಡಾ.ಮಾರುತಿ ಸಿ.ವಿ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಚಿನ್ನಬೋವಿ ಇತರರು ಹಾಜರಿದ್ದರು.

ಕಾರ್ಯಾಗಾರದಲ್ಲಿ ಕರ್ನಾಟಕ ಸೇರಿದಂತೆ ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಿಂದಲೂ ಡಿಸೆಕ್ಟರ್ಸ್ ಮತ್ತು ಅಬ್ಸರ್ವರ್ ಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

# ಶಿವಪುರ ಸತ್ಯಾಗ್ರಹ ಸೌಧದ ಅಭಿವೃದ್ಧಿ ನೀಲ ನಕ್ಷೆ ಪರಿಶೀಲಿಸಿದ ಮಂಡ್ಯ ಡಿಸಿ







**ಮದ್ದೂರು:** ತಾಲ್ಲೂಕಿನ ಶಿವಪುರದಲ್ಲಿರುವ ಐತಿಹಾಸಿಕ ಪಾರಂಪರಿಕ ಸ್ಥಳವಾದ ಧ್ವಜ ಸತ್ಯಾಗ್ರಹ ಸೌಧದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಶುಕ್ರವಾರ ಸತ್ಯಾಗ್ರಹ ಸೌಧ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶಿವಪುರ ಸತ್ಯಾಗ್ರಹ ಸೌಧವು ದೇಶದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಐತಿಹಾಸಿಕ ಸ್ಮಾರಕವಾಗಿದ್ದು, ಇದರ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಸರ್ಕಾರದಿಂದ ರೂ. 2.00 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿದೆ.

ಈ ಅನುದಾನದಡಿ ಶಿವಪುರ ಸತ್ಯಾಗ್ರಹ ಸೌಧದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದ್ದು, ಈ ಸಂಬಂಧ ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಳಕಂಡ ಅಗತ್ಯ ಮಾರ್ಗಸೂಚಿಗಳನ್ವಯ ಕ್ರಮವಹಿಸುವಂತೆ ಸೂಚನೆ ನೀಡಿದರು.

- **ಮದ್ದೂರು ಪಟ್ಟಣದ ಶಿವಪುರ ಸತ್ಯಾಗ್ರಹ ಸೌಧದ ಅನೆಕ್ಸ್ ಕಟ್ಟಡದಲ್ಲಿರುವ ಶೌಚಾಲಯಗಳ ದುರಸ್ತಿ ಹಾಗೂ ಒಂದು ಬೋರ್‌ವೆಲ್ ಕೊರೆಸುವ ಕಾಮಗಾರಿ.**
- **ಸತ್ಯಾಗ್ರಹ ಸೌಧಕ್ಕೆ ನಾಮಫಲಕ ಹಾಗೂ ಶಿಲಾಫಲಕ ಅಳವಡಿಕೆ ಮತ್ತು ಆರ್ಚ್ ಗೇಟ್ ನಿರ್ಮಾಣ.**
- **ಸತ್ಯಾಗ್ರಹ ಸೌಧಕ್ಕೆ ಬಣ್ಣ ಬಳಿಯುವುದು, ಆವರಣದ ತಗ್ಗು ಪ್ರದೇಶಗಳನ್ನು ಎತ್ತರಿಸುವುದು ಹಾಗೂ ಇಂಟರ್‌ಲಾಕ್ ಪೇವರ್ಸ್ ಅಳವಡಿಕೆ.**
- **ಸೌಧದ ಒಳಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕದ ಸುತ್ತ ಕಾಂಪೌಂಡ್ ವಾಲ್ ನಿರ್ಮಾಣ.**
- **ಕಬ್ಬಿಣದ ಬಾಗಿಲುಗಳನ್ನು ಅಳವಡಿಸುವುದು ಹಾಗೂ ಅಗತ್ಯ ಸ್ಟ್ಯಾಂಡ್‌ಗಳನ್ನು ನಿರ್ಮಿಸುವುದು.**
- **ಸೌಧದ ಒಳಭಾಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸತ್ಯಾಗ್ರಹಕ್ಕೆ ಸಂಬಂಧಿಸಿದ ಏಳು ಭಾವಚಿತ್ರಗಳನ್ನು ಅಳವಡಿಸುವುದು.**
- **ಸತ್ಯಾಗ್ರಹ ಸೌಧಕ್ಕೆ ಕಾವಲುಗಾರರ ನೇಮಕ.**
- **ಸತ್ಯಾಗ್ರಹ ಸೌಧದ ಬಲಭಾಗದಲ್ಲಿ ಅನೆಕ್ಸ್ ಕಟ್ಟಡ ನಿರ್ಮಿಸಿ, ಶಿವಪುರದ ಸ್ವಾತಂತ್ರ್ಯ ಹೋರಾಟ ಸೇರಿದಂತೆ ರಾಜ್ಯ ಹಾಗೂ ದೇಶದಾದ್ಯಂತ ನಡೆದ ಸ್ವಾತಂತ್ರ್ಯ ಹೋರಾಟಗಳ ಮಾಹಿತಿ ಮತ್ತು ಮಹಾತ್ಮ ಗಾಂಧೀಜಿಯವರ ಕುರಿತು ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸುವ ವ್ಯವಸ್ಥೆ.**
- **ಸತ್ಯಾಗ್ರಹ ಸೌಧದ ಆವರಣದಲ್ಲಿ ಇರುವ ಸಂಗೀತ ಕಾರಂಜಿಯನ್ನು ಪುನರುಜ್ಜೀವನಗೊಳಿಸುವುದು.**

ಈ ಎಲ್ಲಾ ಕಾಮಗಾರಿಗಳನ್ನು ಅತೀ ತುರ್ತಾಗಿ ಪ್ರಾರಂಭಿಸಿ, ಉತ್ಕೃಷ್ಟ ದರ್ಜೆಯಲ್ಲಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸ್ಪಷ್ಟ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ, ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ, ಪೌರಾಯುಕ್ತರು, ಮದ್ದೂರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮದ್ದೂರು ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದರು.

# ಡಿಎಂಕೆಗೆ ಖಖಖ ಹೊಡೆತ: ಕರಡು ಮತದಾರರ ಪಟ್ಟಿಯಿಂದ 97 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರು ಡಿಲೀಟ್!



**ಚೆನ್ನೈ:** ತಮಿಳುನಾಡಿನಲ್ಲಿ SIR (ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ) ಆಡಳಿತಾರೂಢ ಡಿಎಂಕೆಗೆ ತೀವ್ರ ಹೊಡೆತ ನೀಡಿದೆ.

ರಾಜ್ಯದ ಎಲ್ಲಾ 38 ಜಿಲ್ಲೆಗಳಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಗಳು (DEO) ಶುಕ್ರವಾರ ಬಿಡುಗಡೆ ಮಾಡಿದ ಕರಡು ಮತದಾರರ ಪಟ್ಟಿಯಿಂದ 97 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರನ್ನು ಕೈಬಿಡಲಾಗಿದೆ. ಸದ್ಯ ಇರುವ 6.41 ಕೋಟಿ ಮತದಾರ ಪಟ್ಟಿಯಿಂದ 97 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ಡಿಲೀಟ್ ಮಾಡಲಾಗಿದೆ.

ಡಿಸೆಂಬರ್ 14 ರಂದು SIR ಪ್ರಕ್ರಿಯೆ ಅಂತಿಮಗೊಂಡಾಗ ಸುಮಾರು 97.4 ಲಕ್ಷ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಸಾಧ್ಯತೆಯಿದೆ ಎಂದು ಖಿಓಖಇ ಡಿಸೆಂಬರ್ 16 ರಂದು ವರದಿ ಮಾಡಿತ್ತು.

ಶುಕ್ರವಾರ ಅಧಿಕೃತವಾಗಿ ಬಿಡುಗಡೆಯಾದ ಅಂಕಿಅಂಶಗಳು ಅದನ್ನೇ ದೃಢಪಡಿಸಿದ್ದು, ರಾಜ್ಯದ ಮತದಾರರ ಪಟ್ಟಿಯ ಗಾತ್ರವು ಶೇ.15. 2 ರಷ್ಟು ಅಂದರೆ 5.4 ಕೋಟಿಗೆ ಕುಗ್ಗಿದೆ.

ಜಿಲ್ಲೆಗಳ ಪೈಕಿ ಚೆನ್ನೈಯಲ್ಲಿ ಅತಿ ಹೆಚ್ಚು ಶೇ. 35. 6 ರಷ್ಟು ದೊಡ್ಡ ಕುಸಿತವನ್ನು ಕಂಡಿದೆ. ಸದ್ಯ ಇರುವ 40.04 ಲಕ್ಷ ಮತದಾರರ ಪಟ್ಟಿಯಿಂದ 14.25 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ. ಕೈಬಿಡಲಾದ 97.4 ಲಕ್ಷ ಮತದಾರರ ಹೆಸರುಗಳಲ್ಲಿ ಸರಿ ಸುಮಾರು 53 ಲಕ್ಷ (ಶೇ. 54) ಮತದಾರರು ಸ್ಥಳಾಂತರವಾಗಿರುವುದಾಗಿ ಹೇಳಲಾಗಿದೆ. 27 ಲಕ್ಷ ಮತದಾರರು (ಶೇ.28) ಮೃತಪಟ್ಟಿದ್ದು, 13.6 ಲಕ್ಷ (ಶೇ.14) ಮತದಾರರು ಗೈರುಹಾಜರಿ ಅಥವಾ ಪತ್ತೆಯಾಗಿಲ್ಲ, 3.98 ಲಕ್ಷ (ಶೇ.4) ಮತದಾರರು ನಕಲು ಮತದಾರರು ಎನ್ನಲಾಗಿದೆ. ಸುಮಾರು 16,400 (ಶೇ. 0.2) ಮತದಾರರ ಹೆಸರು ಕೈಬಿಡಲು ಇತರ ಕಾರಣಗಳನ್ನು ನೀಡಲಾಗಿದೆ.

ಚೆಂಗಲ್ಪಟ್ಟು, ತಿರುಪ್ಪೂರ್, ಕೊಯಮತ್ತೂರು ಮತ್ತು ಕಾಂಚೀಪುರಂನಲ್ಲಿಯೂ ಮತದಾರರ ಸಂಖ್ಯೆಯಲ್ಲಿ ತೀವ್ರ ಕಡಿಮೆಯಾಗಿದೆ. ಈ ಜಿಲ್ಲೆಗಳಲ್ಲಿ ಕ್ರಮವಾಗಿ 7 ಲಕ್ಷ, 5.6 ಲಕ್ಷ, 6.5 ಲಕ್ಷ ಮತ್ತು 2.7 ಲಕ್ಷ ಮತದಾರರಿದ್ದಾರೆ.

# ಪಿಜಿಗೆ ಹೋಗುತ್ತಿದ್ದ ವೈದ್ಯೆ ಮೇಲೆ ಲೈಂಗಿಕ ದೌರ್ಜನ್ಯ!

**ಬೆಂಗಳೂರು:** ಕರ್ತವ್ಯ ಮುಗಿಸಿ ತನ್ನ ಪೇಯಿಂಗ್ ಗೆಸ್ಟ್ ವಸತಿಗೃಹಕ್ಕೆ ಹಿಂತಿರುಗುತ್ತಿದ್ದ 28 ವರ್ಷದ ವೈದ್ಯೆಯೊಬ್ಬರ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಎಜಿಬಿ ಲೇಔಟ್‌ನಲ್ಲಿ ಮಂಗಳವಾರ ಮತ್ತು ಬುಧವಾರ ಮಧ್ಯರಾತ್ರಿ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ಮಹಿಳೆ ಆಸ್ಪತ್ರೆಯಲ್ಲಿ ಕರ್ತವ್ಯ ಮುಗಿಸಿ ರಾತ್ರಿ 1 ಗಂಟೆ ಸುಮಾರಿಗೆ ತನ್ನ ಪಿಜಿಗೆ ಹೋಗುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ಬಿಳಿ ಸ್ಕೂಟರ್‌ನಲ್ಲಿ ಅವರ ಬಳಿ ಬಂದು ನಿಲ್ಲಿಸುತ್ತಾನೆ. ಸ್ಕೂಟರ್‌ನಿಂದ ಇಳಿದು ಬಸ್ ನಿಲ್ದಾಣ ಸ್ಥಳದ ಬಗ್ಗೆ ವಿಚಾರಿಸುತ್ತ ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾನೆ ಮತ್ತು ಅನುಚಿತವಾಗಿ ಸ್ಪರ್ಶಿಸಿದ್ದಾನೆ ಎಂದು ಮಹಿಳೆ ಆರೋಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಆಕೆ ಕೂಗಿಕೊಂಡಾಗ ಆರೋಪಿ ತನ್ನ ಸ್ಕೂಟರ್‌ನಲ್ಲಿ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಡಿಸೆಂಬರ್ 17 ರಂದು ಮಹಿಳೆ ನೀಡಿದ ದೂರಿನ ಆಧಾರದ ಮೇಲೆ, ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 74 ಅಡಿಯಲ್ಲಿ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಡಿ.21ರಂದು ರಾಜ್ಯ ಮಟ್ಟದ ಬೃಹತ್ ಕಾರ್ಯಕಾರಿ ಸಭೆ ಮತ್ತು ಚಿಂತನಾ ಸಮಾವೇಶ




**ಮಂಡ್ಯ:** ಶ್ರೀ ಜ್ವಾಲಾ ಮಾಲಿನಿ ಮಹಿಳಾ ಸಮಾಜದ ಆಶ್ರಯದಲ್ಲಿ ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ರಾಜ್ಯ ಮಟ್ಟದ ಬೃಹತ್ ಕಾರ್ಯಕಾರಿ ಸಭೆ ಮತ್ತು ಚಿಂತನಾ ಸಮಾವೇಶವನ್ನು ಡಿ.21ರಂದು ನಗರದ ಮಹಾವೀರ ಭವನದಲ್ಲಿ ಆಯೋಜಿಸಲಾಗಿದೆ ಎಂದು ಶ್ರೀ ಜ್ವಾಲಾ ಮಾಲಿನಿ ಮಹಿಳಾ ಸಮಾಜದ ಅಧ್ಯಕ್ಷೆ ಪೂರ್ಣಿಮಾ ಗೊಮ್ಮಟೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಸದಲ್ಲಿ ರಾಜ್ಯ ಮಟ್ಟದ ಜೈನ ಮಹಿಳಾ ಸಮ್ಮೇಳನ, ಕನ್ನಡ ಸಾಹಿತ್ಯ ಸೇವೆಗೆ ಜೈನ ಮಹಿಳೆಯರ ಕೊಡುಗೆ, ಅಲ್ಪಸಂಖ್ಯಾತ ಸಹಕ್ಕುಗಳು ಹಾಗೂ ಸ್ವಾಲಂಬನೆ ಬಗ್ಗೆ ಮಹತ್ವದ ನಿರ್ಣಯಗಳ ಘೋಷಣೆ ಮಾಡಲಾಗುವುದು ಎಂದು ಹೇಳಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಲಿರುವ ಮಹಿಳಾ ಪ್ರತಿನಿಧಿಗಳ ಸಮ್ಮುಖದಲ್ಲಿ ಸಮಾಜದ ಮತ್ತು ನಾಡಿನ ಹಿತದೃಷ್ಠಿಯಿಂದ ಕನ್ನಡ ಸಾರಸತ್ವ ಲೋಕಕ್ಕೆ ಜೈನ ಮಹಿಳೆಯರ ಸಮರ್ಪಣೆ, ಅಲ್ಪಸಂಖ್ಯಾತ ಹಕ್ಕುಗಳು ಮತ್ತು ಕೇಂದ್ರ ಸರಕಾರದ ಯೋಜನೆಗಳ ಸದುಪಯೋಗ, ಪರಿಸರ ಕಾಳಜಿ ಮತ್ತು ಸ್ವಾವಲಂಬನೆ– 'ಕಸದಿಂದ ರಸ' ಕಾರ್ಯಾಗಾರದ ವಿಷಯಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಚರ್ಚೆ ಮಾಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಪ್ರೀತಿಶುಭಚಂದ್ರ, ನಗರಸಭೆ ಆಯುಕ್ತೆ ಪಂಪಶ್ರೀ, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಮಧುಶ್ರೀ ಭಾಗವಹಿಸಲಿದ್ದಾರೆ. ಜೈನ ಸಮಾಜದ ಬಂಧುಗಳು ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಮನವಿ ಮಾಡಿದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷೆ ಅನುಷ ಮಹವೀರ್, ಕಾರ್ಯದರ್ಶಿ ಕುಸುಮ ಶಯನ್, ಖಜಾಂಚಿ ರಂಜಿತಪ್ರಸಾದ್, ಸಂಘಟನಾ ಕಾರ್ಯದರ್ಶಿ ಕೆ.ಎಸ್.ರತ್ನ ಇದ್ದರು.

# ಡಿ.22 ಮತ್ತು 23ರಂದು ಗುರುವಂದನಾ ಕಾರ್ಯಕ್ರಮ




**ಮಂಡ್ಯ:** ಹೊಯ್ಸಳ ಕರ್ನಾಟಕ ಸೇವಾ ಟ್ರಸ್ಟ್ ಹಾಗೂ ಶ್ರೀ ಶಂಕರ ಸೇವಾ ಪ್ರತಿಷ್ಠಾನದ ವತಿಯಿಂದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿದಾನಂ ಅವರ ಸಾನಿಧ್ಯದಲ್ಲಿ ಗುರುವಂದನಾ ಕಾರ್ಯಕ್ರಮವನ್ನು ಡಿ.22 ಮತ್ತು 23ರಂದು ಆಯೋಜಿಸಲಾಗಿದೆ ಎಂದು ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕ ಕಶ್ಯಪ್‌ನಂದನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಡಿ.22ರ ಸಂಜೆ ಮಹಾವೀರ ವೃತ್ತದಿಂದ ಪೂರ್ಣಕುಂಭ ಸ್ವಾಗ, ವೇದಘೋಷ, ಭಜನೆ, ನಾದಸ್ವರದೊಂದಿಗೆ ವಿ.ವಿ ರಸ್ತೆಗೆ ವಿದ್ಯಾಗಣಪತಿ ದೇವಾಸ್ಥನದವರೆಗೆ ಮರೆವಣಿಗೆ ಮಾಡಲಾಗುವುದು. ಮೆರವಣಿಗೆ, ವಿದ್ಯಾಗಣಪತಿ ದರ್ಶನ, ಮಹಾಮಂಗಳಾರತಿ ಜಗದ್ಗುರುಗಳಿಂದ ಕೈಲಾಸೇಶ್ವರ ಹಾಗೂ ನವಗ್ರಹ ದೇವರ ದರ್ಶನ ಮತ್ತು ಆರತಿ, ದಂಪತಿಗಳಿಂದ ಧೂಳಿ ಪೂಜೆ, ಫಲ ಸಮರ್ಪಣೆ ನೆರವೇರಿಸಲಾಗುವುದು. ಸಭಾ ಕಾರ್ಯಕ್ರಮದ ನಂತರ ಪಾದಪೂಜೆ, ವಸ್ತ್ರಮರ್ಪಣೆ ಸೇವೆಗಳು ನಡೆಯಲಿದೆ ಎಂದರು.

ಡಿ.23ರಂದು ಬೆಳಿಗ್ಗೆ 9.30ಕ್ಕೆ ನೆಹರು ನಗರದ ಶಂಕರಮಠಕ್ಕೆ ಶ್ರೀಗಳು ಆಗಮಿಸಲಿದ್ದಾರೆ. ಅಲ್ಲಿ ಶ್ರೀ ರತ್ನಗಣಪತಿ, ಚಂದ್ರಮೌಳೇಶ್ವರ ಹಾಗೂ ಶಾರದಾಂಬೆಗೆ ಆರತಿ ಶಂಕರ ಸೇವಾ ಪ್ರತಿಷ್ಠಾನದ ಟ್ರಸ್ಟಿಗಳಿಂದ ಫಲ ಸಮರ್ಪಣೆ ಹಾಗೂ ಶ್ರೀಗಳಿಂದ ಸ್ವಾಗತ ಸಮಿತಿ ಗಣ್ಯರಿಗೆ ಮತ್ತು ಸಾರ್ವಜನಿಕರಿಗೆ ಫಲಮಂತ್ರಾಕ್ಷತೆ ಕಾರ್ಯಕ್ರಮ ನಡೆಯಲಿದೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಟ್ರಸ್ಟ್‌ನ ಅದ್ಯಕ್ಷ ಸಿ.ಕೆ.ನರಸಿಂಹಸ್ವಾಮಿ, ಕಾರ್ಯಾಧ್ಯಕ್ಷ ಡಾ.ಅಶ್ವಿನ್ ನಾರಾಯಣ್, ಉಪಾಧ್ಯಕ್ಷ ಎಸ್.ಶಂಕರನಾರಾಯಣ ಶಾಸ್ತ್ರಿ, ಕಾರ್ಯದರ್ಶಿ ಹೊಳಲು ರಾಘವೇಂದ್ರ, ಪ್ರತಿಷ್ಠಾನದ ಅಧ್ಯಕ್ಷ ಎನ್.ಸುರೇಶ್, ಟ್ರಸ್ಟಿ ಟಿ.ಕೆ.ಚಂದ್ರಶೇಖರ್, ಗಣೇಶ್ ಇದ್ದರು.

# ಸಂಕಷ್ಟದಲ್ಲೂ ಭರವಸೆಯ ಬೆಳಕಾಗಿ ಕಂಡವರು ತಗಡೂರು: ಗಣ್ಯರ ಶ್ಲಾಘನೆ



**ಲೋಹಿಯ ಪ್ರಶಸ್ತಿ ಪ್ರದಾನ**




**ಬೆಂಗಳೂರು:** ನಿಸ್ವಾರ್ಥ ಸೇವಾಮನೋಭಾವನೆಯಿಂದ ಕೆಲಸ ಮಾಡುವವರ ಸಂಖ್ಯೆ ವಿರಳವಾಗಿದೆ. ಅಂಥವರ ನಡುವೆ ಶಿವಾನಂದ ತಗಡೂರು ಅವರು ವಿಭಿನ್ನವಾಗಿ ಗಮನ ಸೆಳೆಯುವ ಕೆಲಸ ಮಾಡುತ್ತಿರುವುದು ಅಭಿನಂದನೀಯ ಎಂದು ಗಣ್ಯರು ಶ್ಲಾಘಿಸಿದರು.

ರೈತ ಕುಟುಂಬದಿಂದ ಬಂದ ತಗಡೂರು ಅವರು ರೈತ ಮತ್ತು ಜನಪರ ಚಳವಳಿಯಲ್ಲಿ ಗುರುತಿಸಿಕೊಳ್ಳುತ್ತಲೇ ಪತ್ರಕರ್ತರಾಗಿ ರೂಪುಗೊಂಡಿದ್ದು, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಚುಕ್ಕಾಣಿ ಹಿಡಿದು, ಆ ಮೂಲಕ ಪತ್ರಕರ್ತರ ಸಮುದಾಯಕ್ಕೆ ನೀಡುತ್ತಿರುವ ಸೇವೆ ಅನನ್ಯವಾದದ್ದು ಎಂದು ಸಮಾರಂಭದಲ್ಲಿ ಸ್ಮರಿಸಿ ಅಭಿನಂದಿಸಲಾಯಿತು.

ಬೆಂಗಳೂರು ನಾಗರೀಕರ ವೇದಿಕೆ ಮತ್ತು ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟಸ್ಟ್ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾಗಿ 3ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾದ ಶಿವಾನಂದ ತಗಡೂರು ಅವರಿಗೆ ಹಮ್ಮಿಕೊಂಡಿದ್ದ ನಾಗರೀಕ ಸನ್ಮಾನ ಮತ್ತು ಲೋಹಿಯಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತಗಡೂರು ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗಾಂಧಿಭವನದ ಅಧ್ಯಕ್ಷ ಮತ್ತು ಶಿಕ್ಷಣ ತಜ್ಞ ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಮುಖ್ಯವಾಹಿನಿ ಮಾಧ್ಯಮವು ಇಂದಿಗೂ ತನ್ನ ಗಟ್ಟಿತನದ ಮೂಲಕ ಘನತೆಯನ್ನು ಉಳಿಸಿಕೊಂಡು ಬಂದಿದೆ. ಇದೇ ನಮಗೆಲ್ಲ ಆಶಾದಾಂ೦ುಕ ಬೆಳವಣಿಗೆ ಎಂದರು. ರಾಮಮನೋಹರ ಲೋಹಿಯಾ ಅವರು ದೇಶದ ರಾಜಕಾರಣದಲ್ಲಿ ಚಲನೆಯನ್ನು ತಂದವರು. ಲೋಹಿಯಾ ವಾದದಲ್ಲಿ ಬೆಳೆದು ಅರಳಿದ ಪ್ರತಿಭೆಗಳು ದೇಶ ಉದ್ದಗಕ್ಕೂ ಇದ್ದಾರೆ. ಅವರ ಹೆಸರಿನ ಪ್ರಶಸ್ತಿಯನ್ನು ಶಿವಾನಂದ ತಗಡೂರು ಅವರಿಗೆ ನೀಡುತ್ತಿರುವುದು ಅಭಿನಂದನೀಯ ಮತ್ತು ನಮಗೆಲ್ಲರಿಗೂ ಹೆಮ್ಮೆ ಎಂದರು.

ಸಂಘಟನೆ, ಸಂಸ್ಕಾರ, ಸೇವೆ ವ್ಯಕ್ತಿಯ ಸಾಧನೆಗೆ ಮುಖ್ಯ. ಇನ್ನೊಬ್ಬರ ಸೇವೆಯಲ್ಲಿ ನಮ್ಮನ್ನು ನಾವು ಕಳೆದುಕೊಳ್ಳುವುದೇ ಸಾರ್ಥಕ ಬದುಕು. ಅಂತಹ ವ್ಯಕ್ತಿತ್ವದ ತಗಡೂರು ಇನ್ನಷ್ಟು ಎತ್ತ=ರಕ್ಕೆ ಬೆಳೆಯಲಿ ಎಂದು ಆಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ಟ ಐನಕೈ ಅವರು, ಪತ್ರಕರ್ತರನ್ನು ಟೀಕೆ ಮಾಡುವವರೆ ಹೆಚ್ಚು. ಆದರೆ ಪತ್ರಕರ್ತರಿಗೆ ನಾಗರಿಕ ಸನ್ಮಾನ ಮಾಡುತ್ತಿರುವುದು ಅತ್ಯಂತ ಅಪರೂಪ. ಲೋಹಿಯಾ ಪ್ರಶಸ್ತಿಗಿಂತಲೂ ಈ ನಾಗರೀಕ ಸನ್ಮಾನ ಮುಖ್ಯವಾದದ್ದು. ಇದಕ್ಕೆ ಭಾಜನರಾಗಿರುವ ಶಿವಾನಂದ ತಗಡೂರು ನಿಜಕ್ಕೂ ಅಭಿನಂದನೀಯ ಎಂದರು.

ಅಭಿನಂದನಾ ಭಾಷಣ ಮಾಡಿದ ಕನ್ನಡಪ್ರಭ ಸಂಪಾದಕ ರವಿಹೆಗಡೆ, ಪತ್ರಿಕೋದ್ಯಮದಲ್ಲಿರುವ ಎಡ ಬಲದ ಸಂಘರ್ಷದ ನಡುವೆ ಯಾವುದಕ್ಕೂ ಅಂಟಿಕೊಳ್ಳದೆ ತಗಡೂರು ಸೇವೆ ಸಲ್ಲಿಸುತ್ತಿರುವುದನ್ನು ನಾನು ಹತ್ತಿರದಿಂದ ನೋಡಿರುವ. ಎಲ್ಲಕ್ಕಿಂತಲೂ ಮೊದಲು ಮಾನವೀಯತೆಯೇ ನಿಜವಾದ ಪತ್ರಕರ್ತನ ಜವಾಬ್ದಾರಿ ಎನ್ನುವುದನ್ನು ಅರಿತು ಆ ನಿಟ್ಟಿನಲ್ಲಿಯೇ ಪತ್ರಕರ್ತರ ಸಂಘಟನೆಯನ್ನು ರೂಪಿಸಿ ನಡೆಸುತ್ತಿರುವುದು ವಿಶೇಷ ಎಂದು ಅವರ ಸೇವೆ ಸ್ಮರಿಸಿದರು.


ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಪತ್ರಕರ್ತರಿಗೆ ಹಗಲಿರಳು ನೆರವಾಗುವ ಮೂಲಕ ತಮ್ಮ ಹೊಣೆಗಾರಿಕೆಯನ್ನು ಮೆರೆದಿದ್ದ ತಗಡೂರು ಅವರನ್ನು ಗೌರವಿಸಲು ಇದು ನಮಗೆ ಸಿಕ್ಕ ಅವಕಾಶ ಎಂದರು.

ದೂರದರ್ಶನದ ಕಾರ್ಯಕ್ರಮ ಮುಖ್ಯಸ್ಥೆ ಎಚ್.ಎನ್.ಆರತಿ ಮಾತನಾಡಿ, ಹಿರಿಯ ಪತ್ರಕರ್ತರನ್ನು ಅವರ ಮನೆಯ ಅಂಗಳದಲ್ಲಿ ಅಭಿನಂದಿಸುವ ಕೆಲಸ ಮಾಡಿದ ತಗಡೂರು ಅಭಿನಂದನೀಯ ಎಂದರು.

ಕಾರ್ಯಕ್ರಮದ ಸಂಯೋಜಕ ಡಾ.ಎಸ್. ರಾಮಲಿಂಗೇಶ್ವರ (ಸಿಸಿರಾ) ಸ್ವಾಗತಿಸಿದರು.

ಭೂಮಿ ಫೌಂಡೇಶನ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಪತ್ರಿಕಾ ವಿತರಕರ ಸಂಘ, ರಂಗಸಿರಿ ಬಳಗ ಮತ್ತು ವಿವಿಧ ಘಟಕಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ವಿವಿಧ ಸಂಘ ಸಂಸ್ಥೆಗಳು ಶಿವಾನಂದ ತಗಡೂರು ಅವರನ್ನು ಅಭಿನಂದಿಸಿದವು

# ಉಸ್ಮಾನ್ ನಿಧನ: ಬಾಂಗ್ಲಾದಲ್ಲಿ ಭುಗಿಲೆದ್ದ ಹಿಂಸಾಚಾರ



**ಢಾಕಾ:** ಕಳೆದ ವಾರ ಗುಂಡೇಟಿಗೆ ಬಲಿಯಾದ ಪ್ರಮುಖ ನಾಯಕ ಷರೀಫ್ ಉಸ್ಮಾನ್ ಹಾದಿ ಅವರ ನಿಧನದ ಹಿನ್ನೆಲೆಯಲ್ಲಿ ಬಾಂಗ್ಲಾದೇಶ ಸರ್ಕಾರದ ವಿರುದ್ದ ಆಕ್ರೋಶ ಭುಗಿಲೆದ್ದಿದ್ದು ದುಷ್ಕರ್ಮಿಗಳು ಭಾರತಕ್ಕೆ ಪಲಾಯನ ಮಾಡಿದ್ದಾರೆ ಅವರನ್ನು ಹಿಂತಿರುಗಿಸುವ ತನಕ ಭಾರತೀಯ ರಾಯಭಾರ ಕಚೇರಿ ಮುಚ್ಚುವಂತೆ ಆಗ್ರಹಿಸಿ ಪ್ರತಿಭಟನೆ ತೀವ್ರಗೊಂಡಿದೆ.

ಢಾಕಾದ ಕೇಂದ್ರ ಬಿಜೋಯ್‌ನಗರ ಪ್ರದೇಶದಲ್ಲಿ ಷರೀಫ್ ಉಸ್ಮಾನ್ ಹಾದಿ ಪ್ರಚಾರ ನಡೆಸುತ್ತಿದ್ದಾಗ, ಮುಸುಕುಧಾರಿ ಬಂದೂಕುಧಾರಿಗಳು ಅವರ ತಲೆಗೆ ಗುಂಡು ಹಾರಿಸಿದ್ದರು. ಡಿಸೆಂಬರ್ 15 ರಂದು ಅವರನ್ನು ಸಿಂಗಾಪುರ ಜನರಲ್ ಆಸ್ಪತ್ರೆ (ಎಸ್‌ಜಿಹೆಚ್) ನರಶಸ್ತ್ರಚಿಕಿತ್ಸಾ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಯಿತು ನಿನ್ನೆ ಮೃತರಾಗಿದ್ದಾರೆ.

ಇಂಕ್ವಿಲಾಬ್ ಮಂಚ್ ಸಂಚಾಲಕರೂ ಆಗಿದ್ದ ಷರೀಫ್ ಉಸ್ಮಾನಿ ಹಾದಿ ಅವರು ಫೆಬ್ರವರಿಯಲ್ಲಿ ನಡೆಯಲಿರುವ ಬಾಂಗ್ಲಾದೇಶದ ಸಾರ್ವತ್ರಿಕ ಚುನಾವಣೆಯ ಅಭ್ಯರ್ಥಿಯಾಗಿದ್ದರು. ಕೆಲ ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಅವರು ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಎಸ್ ಜಿ ಎಚ್ ಮತ್ತು ರಾಷ್ಟ್ರೀಯ ನರವಿಜ್ಞಾನ ಸಂಸ್ಥೆಯ ವೈದ್ಯರ ಅತ್ಯುತ್ತಮ ಪ್ರಯತ್ನದ ಹೊರತಾಗಿಯೂ, ಷರೀಫ್ ಹಾದಿ ಅವರು ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದ್ದಾರೆ.


ವಿದೇಶಾಂಗ ಸಚಿವಾಲಯ ಸಿಂಗಾಪುರದಲ್ಲಿರುವ ಬಾಂಗ್ಲಾದೇಶ ಹೈಕಮಿಷನ್‌ಗೆ ಷರೀಫ್ ಹಾದಿ ಮೃತದೇಹವನ್ನು ಬಾಂಗ್ಲಾದೇಶಕ್ಕೆ ವಾಪಸ್ ಕಳುಹಿಸಲು ನೆರವು ನೀಡಿದೆ ಎಂದು ಸಿಂಗಾಪುರದ ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಷರೀಫ್ ಉಸ್ಮಾನಿಯ ಹಾದಿ ಸಾವು ಬಾಂಗ್ಲಾದೇಶದಾದ್ಯಂತ ಭಾರಿ ಪ್ರತಿಭಟನೆಗಳಿಗೆ ಕಾರಣವಾಗಿದ್ದು ಢಾಕಾ ವಿಶ್ವವಿದ್ಯಾಲಯದ ಆವರಣದ ಬಳಿ ನೂರಾರು ಜನರು ಮತ್ತು ವಿದ್ಯಾರ್ಥಿಗಳು ಜಮಾಯಿಸಿ ?ನೀನು ಯಾರು, ನಾನು ಹಾದಿ, ಹಾದಿ? ಎಂಬ ಘೋಷಣೆಗಳನ್ನು ಕೂಗಿ ದುಷ್ಕರ್ಮಿಗಳ ವಿರುದ್ದ ಆಕ್ರೋಶ ಹೊರಹಾಕಿದ್ದಾರೆ. ಪ್ರತಿಭಟನೆಯ ಸಮಯದಲ್ಲಿ, ವಿಶೇಷವಾಗಿ ನ್ಯಾಷನಲ್ ಸಿಟಿಜನ್ ಪಾರ್ಟಿ ನಿಂದ ಕೆಲವು ಭಾರತ ವಿರೋಧಿ ಘೋಷಣೆಗಳನ್ನು ಕೂಗಲಾರಂಬಿಸಿದ್ದು. ಹಾದಿಯ ಮೇಲೆ ಹಲ್ಲೆ ನಡೆಸಿದವರು ಭಾರತಕ್ಕೆ ಪಲಾಯನ ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ., ಅವರನ್ನು ಹಿಂತಿರುಗಿಸುವವರೆಗೆ ಭಾರತೀಯ ಹೈಕಮಿಷನ್ ಅನ್ನು ಮುಚ್ಚುವಂತೆ ಮಹಮ್ಮದ್ ಯೂನಸ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮಧ್ಯಂತರ ಸರ್ಕಾರ, ಭಾರತ ಹಾದಿ ಹಂತಕರನ್ನು ಹಿಂದಿರುಗಿಸುವವರೆಗೆ, ಬಾಂಗ್ಲಾದೇಶದಲ್ಲಿರುವ ಭಾರತೀಯ ಹೈಕಮಿಷನ್ ಮುಚ್ಚಿರುತ್ತದೆ. ಎಂದು ಎನ್‌ಸಿಪಿ ನಾಯಕ ಸರ್ಜಿಸ್ ಆಲ್ಮ್ ಹೇಳಿದ್ದಾರೆ.

ಕೆಲವು ಪ್ರತಿಭಟನಾಕಾರರು ಢಾಕಾದಲ್ಲಿರುವ ಬಾಂಗ್ಲಾ ಪತ್ರಿಕೆ ಪ್ರೋಥೋಮ್ ಅಲೋ ಕಚೇರಿಯ ಮೇಲೂ ದಾಳಿ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

## ಪದಬಂಧ




### ಎಡದಿಂದ ಬಲಕ್ಕೆ.....

1. ಹೆಗಲು ಮುಟ್ಟಿ ನೋಡಿಕೊಂಡು ಕಳ್ಳ ಸಿಕ್ಕಿ ಹಾಕಿಕೊಂಡದ್ದು, ಈ ತರಕಾರಿಯ ಪ್ರಭಾವದಿಂದ....(5)
5. ಕಾಯಿ ಇದ್ದಾಗ ತರಕಾರಿಯಾಗಿ, ಹಣ್ಣಾದಾಗ ದೇವರ ಪೂಜೆಗೆ ಅತ್ಯವಶ್ಯಕವಾಗಿ ಬೇಕಾದ ಇದು ತಿರುಗಿ ನಿಂತಿದೆ.....(2)
6. ಸಮುದ್ರದ ಉಪ್ಪಿನ ಜೊತೆ ತುಂಬ ರುಚಿ ಕೊಡುವ ಇದು ಬೆಟ್ಟದ ಮೇಲೆ ತಿರುಗಿ ನಿಂತಿದೆ.....(2)
7. ಬೆಳೆದು ಬಿದಿರಾಗುವ ಇದು ಎಳೆಯದಿರುವಾಗ ಈ ಹೆಸರಿನ ತರಕಾರಿ.....(3)
8. ಉಪ್ಪಿನ ಕಾಯಿಯಾಗುವ ಇದು, ಹುಡುಗಿಯರು ಧರಿಸುವ ಉಡುಗೆಯಂತಿದೆ.....(2)
9. ಹೆಚ್ಚಿನ ಅಡುಗೆಗೆ ರುಚಿ, ಅಂದ ಕೊಡುವ ಇದು, ಮೂಲದಲ್ಲೇ ದೀರ್ಘಗೊಂಡಿದೆ....(4)
12. ಮಲೆನಾಡು/ಕರಾವಳಿಗರ ಸುಪ್ರಸಿದ್ಧ ಪತ್ರೊಡೆಗೆ ಇದೇ ಮೂಲ ವಸ್ತು..... (2)
13. ಸ್ತ್ರೀಯರ ನೀಳವಾದ ಬೆರಳಿನಂತಿದೆಯೆ? ಈ ತರಕಾರಿ.....(2)
14. ಅಡುಗೆಗೆ ತರಕಾರಿಯಾಗಿಯೂ, ಹಣ್ಣಾದ ಮೇಲೂ ರುಚಿಯಾದ ತಿಂಡಿಗೂ ಒದಗುವ, ತಿರುಗುಮುರುಗಾದ ಇದು ಹಸುಗಳಿಗೂ ಇಷ್ಟ....(3)
15. ಹಿಂದಿಯವರ ವೀಳ್ಯದೆಲೆಯೆ ಇದು?....(2)
16. ಈ ತರಕಾರಿಯಿಂದ ಮಧುಮೇಹಿಗಳಿಗೆ ಜಾಸ್ತಿ ಉಪಯೋಗವೇ.....(3)
17. ತುಂಬ ಜನರ/ಮಕ್ಕಳ ಇಷ್ಟದ ತರಕಾರಿ.....(4)
18. ಸಕ್ಕರೆಯ ಮೂಲವಸ್ತು ಇದುವೇ.....(2)

### ಮೇಲಿನಿಂದ ಕೆಳಕ್ಕೆ.....

2. 'ನೇರಳೆ/ಹಸಿರು ಬಣ್ಣದ ಮುಖಕ್ಕೆ ಹಸಿರು ಟೋಪಿ' ಹಾಕಿ ಕೊಂಡಿರುವ ತರಕಾರಿಯಿದು....(3)
3.......ಇದು ನಿಮ್ಮಿಷ್ಟದ ಪದ...... (4)
4. ಬಿಡಿಸಿದಷ್ಟೂ ಪದರ ಬಿಡಿಸಿಕೊಳ್ಳುವ ತರಕಾರಿಯಿದು.....(4)
5. ಬಳ್ಳಿಯಂತೆ 'ಕೆಳಗಿನಿಂದ ಮೇಲೆ' ಹಬ್ಬಿದ, ಈ ತರಕಾರಿ ಬಳೆ ಹಾಕಿಕೊಂಡಿದೆ(3)
10. ಕಲಸು ಮೇಲೋಗರವಾಗಿರುವ ಸೊಪ್ಪು..... (3)
11. ಬಳ್ಳಿಗೆ, ಚಪ್ಪರ ಹಾಕಿ ಬೆಳೆಯುವ ತರಕಾರಿಯಿದು....(2)
14. ಭೂಮಿಯ ಅಡಿಯಲ್ಲಿ ಬೆಳೆದದ್ದು, ಅಡಿಮೇಲಾಗಿದೆ.....(3)
15. ಲಕ್ ಇರುವವರು ತಿನ್ನೋ ಸೊಪ್ಪೇ ಇದು?....(3)
16. ಗೋ ಮಾತೆಯ ಅಮೃತವಿದು.....(2)



ಜ್ಯೋತಿ ರಾಜೇಶ್

# ಸ್ತ್ರೀ ಸ್ನೇಹಿ–ಶತಾವರಿ



ಶತಾವರಿ ಒಂದು ಆಯುರ್ವೇದ ರಸಾಯನ ಗಿಡಮೂಲಿಕೆಯಾಗಿದ್ದು, ಇದನ್ನು ಸ್ತ್ರೀ ಸ್ನೇಹಿ ಗಿಡಮೂಲಿಕೆ ಎಂದೂ ಕರೆಯುತ್ತಾರೆ.ಇದನ್ನು ಶತಾವರಿ, ಮಜ್ಜಿಗೆ ಗಡ್ಡೆ, ಸದಾವರೆ, ಶತಮೂಲಿ, ಶತಪದಿ, ವೃಷ್ಯ ನಾರಾಯಣಿ, ಜಟ್ಟಮೂಲ ಸಾತೋಮುಲ್, ಸತಮುಲಿ, ಸೈನ್‌ಸರ್ಬೆಲ್, ಸತ್ಮೂಲಿ, ಶತಾವರಿ, ನುಂಗರೇಯಿ, ವರಿ, ಪಾಲಿ, ಛೋಟ್ಟಾ ಕೇಲು, ಶಕಾಕುಲ್, ಶಾಕುಲ್ ಹಲವಾರು ಹೆಸರುಗಳಿಂದ ಆಯುರ್ವೇದದಲ್ಲಿ ಕರೆಯಲಾಗುತ್ತದೆ.

ಶತಾವರಿ ಆಯುರ್ವೇದದಲ್ಲಿ ಜನಪ್ರಿಯ ಮೂಲಿಕೆಯಾಗಿದ್ದು, ಇದರ ಬೇರನ್ನು ಔಷಧಕ್ಕಾಗಿ ಬಳಸಲಾಗುತ್ತದೆ. ಶತಾವರಿ ಎಂದರೆ ಇದು 100 ಬೇರುಗಳನ್ನು ಹೊಂದಿರುವ ಗಿಡಮೂಲಿಕೆ ಎಂದರ್ಥ. ಶತಾವರಿಯ ಅತ್ಯಂತ ಶಕ್ತಿಶಾಲಿ ಭಾಗವೆಂದರೆ ಅದರ ಬೇರುಗಳು.

ಈ ಶತಾವರಿಯನ್ನು ಆಸ್ಪ್ಯಾರಗಸ್ ಎಂದು ಕರೆಯಲಾಗುತ್ತದೆ.ಶತಾವರಿ ಬಳ್ಳಿ 100 ಕ್ಕೂ ಹೆಚ್ಚು ಬೇರುಗಳನ್ನು ಹೊಂದಿದೆ. ಇವು 30–100 ಸೆಂ.ಮೀ ಉದ್ದ ಮತ್ತು ಸುಮಾರು 1–2 ಸೆಂ.ಮೀ. ಇರುತ್ತವೆ. ಅಶ್ವಗಂಧವನ್ನು ಆಯುರ್ವೇದ ಗಿಡಮೂಲಿಕೆಗಳ ರಾಜ ಎಂದರೇ, ಶತಾವರಿಯನ್ನು ಆಯುರ್ವೇದ ಗಿಡಮೂಲಿಕೆಗಳ ರಾಣಿ ಎಂದು ಕರೆಯಲಾಗುತ್ತದೆ.

**ಶಕ್ತಿ ಶಾಲಿ ಶತಾವರಿ ಪ್ರಮುಖ ಉಪಯೋಗಗಳು:**
ಶತಾವರಿ ಮಹಿಳೆಯರಿಗೆ ಮಾತ್ರವಲ್ಲದೆ ಎಲ್ಲರೂ ಉಪಯೋಗಿಸುವಂತಹ ವನಸ್ಪತಿ.ಇದು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ.ಇದು ಮಾನವನ ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುತ್ತದೆ.ಅದಲ್ಲದೆ

ಮುಖ್ಯವಾಗಿ ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯ, ಹಾರ್ಮೋನುಗಳ ಸಮತೋಲನ, ಋತುಚಕ್ರದ ಸಮಸ್ಯೆಗಳು ಮತ್ತು ಋತುಬಂಧದ ಲಕ್ಷಣಗಳನ್ನು ನಿವಾರಿಸುತ್ತದೆ.

- **ಶತಾವರಿಯು ಮಹಿಳೆಯರಲ್ಲಿ ಅಸಾಮಾನ್ಯ ಗರ್ಭಾಶಯ ರಕ್ತಸ್ರಾವದಂತಹ ಸ್ತ್ರೀರೋಗ ಅಸ್ವಸ್ಥತೆಗಳನ್ನು ನಿರ್ವಹಿಸಲು ಉಪಯುಕ್ತವಾದ ಸಾಮಾನ್ಯ ಗಿಡಮೂಲಿಕೆಯಾಗಿದೆ.**
- **ಶತಾವರಿಯು ನಮ್ಮ ಮೆದುಳಿಗೆ ಒಳ್ಳೆಯದು. ನಮ್ಮ ಬುದ್ಧಿಶಕ್ತಿ ಹಾಗೂ ಜ್ಞಾಪಕ ಶಕ್ತಿಯನ್ನು ವೃದ್ಧಿಸುತ್ತದೆ. ಶುಕ್ರಧಾತುವನ್ನು ವೃದ್ಧಿಸುತ್ತದೆ. ಮಾನಸಿಕ ಒತ್ತಡವನ್ನು ಕಡಿಮೆಗೊಳಿಸುತ್ತದೆ. ಮಹಿಳೆಯರಿಗೆ ಅಧಿಕ ಋತುಸ್ರಾವ, ಹೊಟ್ಟೆ ನೋವು, ಬೆನ್ನು ನೋವು, ಗರ್ಭಧಾರಣೆಗೆ ಮೆನೋಪಾಸ್ ಇದು ಉತ್ತಮವಾದ ದ್ರವ್ಯ ಸುಸ್ತು ನಿವಾರಣೆ ಮಾಡುತ್ತದೆ. ಗರ್ಭಾಶಯಕ್ಕೆ ಬಲ ನೀಡುತ್ತದೆ ಪಿಸಿಓಡಿ ಯ ಚಿಕಿತ್ಸೆಯಲ್ಲಿ ಇದು ಉಪಯೋಗಕಾರಿ.**
- ಹಾಲುಣಿಸುವ ತಾಯಂದಿರಿಗೆ, ವಿಶೇಷವಾಗಿ ಎದೆ ಹಾಲಿನ ಅಸಮರ್ಪಕ ಉತ್ಪಾದನೆಯ ಸಮಸ್ಯೆಯನ್ನು ಎದುರಿಸುವವರಿಗೆ ಶತಾವರಿ ತುಂಬಾ ಉಪಯುಕ್ತವಾಗಿದೆ. ಶತಾವರಿಯನ್ನು ಸಾಂಪ್ರದಾಯಿಕವಾಗಿ ಆಯುರ್ವೇದ ಔಷಧಿಗಳಲ್ಲಿ ಹಾಲುಣಿಸುವ ತಾಯಂದಿರಲ್ಲಿ ಎದೆ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಬಳಸಲಾಗುತ್ತದೆ ಏಕೆಂದರೆ ಅದರ ಸ್ತನ್ಯಜನನ (ಎದೆ ಹಾಲು ಉತ್ಪಾದನೆಯನ್ನು ಹೆಚ್ಚಿಸುತ್ತದೆ).
- ವೈದ್ಯರ ಪ್ರಕಾರ, ಶತಾವರಿ ಅದ್ಭುತ ಗಿಡಮೂಲಿಕೆಗಳಲ್ಲಿ ಒಂದಾಗಿದೆ. ಇದು ಪುರುಷರಲ್ಲಿ ವೀರ್ಯದ ಗುಣಮಟ್ಟ ಸುಧಾರಿಸುತ್ತದೆ. ಮತ್ತು ವೀರ್ಯದ ಸಂಖ್ಯೆ ಹೆಚ್ಚಿಸಲು ಸಹಾಯ ಮಾಡುತ್ತದೆ. ಅಷ್ಟೇ ಅಲ್ಲದೇ, ಇದು ಪುರುಷರು ಮತ್ತು ಮಹಿಳೆಯರಲ್ಲಿ ಫಲವತ್ತತೆ ಸುಧಾರಿಸುತ್ತದೆ.
- ಒತ್ತಡ ಆತಂಕದ ಲಕ್ಷಣಗಳನ್ನು ನಿರ್ವಹಿಸಲು ಶತಾವರಿ ಉಪಯುಕ್ತವಾಗಿದೆ. ಆಯುರ್ವೇದದ ಪ್ರಕಾರ, ವಾತ ದೋಷವು ದೇಹ ಮತ್ತು ನರಮಂಡಲದ ಎಲ್ಲಾ ಚಲನೆ ಮತ್ತು ಕ್ರಿಯೆಗಳನ್ನು ನಿಯಂತ್ರಿಸುತ್ತದೆ. ಆತಂಕಕ್ಕೆ ಕಾರಣ ಮುಖ್ಯವಾಗಿ ವಾತ ಅಸಮತೋಲನ. ಶತಾವರಿ ವಾತವನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ ಮತ್ತು ನರಮಂಡಲದ ಮೇಲೆ ಶಾಂತಗೊಳಿಸುವ ಪರಿಣಾಮವನ್ನು ನೀಡುತ್ತದೆ. ಇದು ಉತ್ತಮ ನಿದ್ರೆಯನ್ನು ಉತ್ತೇಜಿಸಲು ಸಹ ಸಹಾಯ ಮಾಡುತ್ತದೆ.
- ಶತಾವರಿ ಹೊಟ್ಟೆಯ ಹುಣ್ಣನ್ನು ನಿರ್ವಹಿಸಲು ಸಹಾಯ ಮಾಡುತ್ತದೆ ಏಕೆಂದರೆ ಅತಿ ಆಮ್ಲೀಯತೆಯು ಹೊಟ್ಟೆಯ ಹುಣ್ಣಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಮತ್ತು ಆಯುರ್ವೇದದಲ್ಲಿ ಪಿತ್ತವು ಅತಿ ಆಮ್ಲೀಯತೆಗೆ ಕಾರಣವಾಗುತ್ತದೆ. ಶತಾವರಿ ಪುಡಿಯನ್ನು ನಿಯಮಿತವಾಗಿ ಸೇವಿಸುವುದರಿಂದ ಹೊಟ್ಟೆಯಲ್ಲಿನ ಆಮ್ಲದ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ
- ಇದು ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದು ಕರುಳಿನಲ್ಲಿ ಗ್ಲೂಕೋಸ್ ಹೀರಿಕೊಳ್ಳುವಿಕೆಯನ್ನು ಕಡಿಮೆ ಮಾಡುತ್ತದೆ. ಇದು ಜೀವಕೋಶಗಳು ಮತ್ತು ಅಂಗಾಂಶಗಳಿಂದ ಗ್ಲೂಕೋಸ್ ಹೀರಿಕೊಳ್ಳುವಿಕೆಯನ್ನು ಹೆಚ್ಚಿಸುತ್ತದೆ.
- ರೋಗನಿರೋಧಕ ಕೋಶಗಳನ್ನು ಉತ್ತೇಜಿಸುವ ಸಪೋಜೆನಿನ್‌ಗಳನ್ನು ಹೊಂದಿರುವುದರಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
- ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ ಮತ್ತು ಹೊಟ್ಟೆಯ ತೊಂದರೆಗಳನ್ನು ನಿವಾರಿಸುತ್ತದೆ.
- ಶತಾವರಿಯು ಬ್ರಾಂಕೈಟಿಸ್‌ನಂತಹ ಉಸಿರಾಟದ ವ್ಯವಸ್ಥೆಯ ಸಮಸ್ಯೆಗಳ ಲಕ್ಷಣಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಏಕೆಂದರೆ ಉಸಿರಾಟದ ಸಮಸ್ಯೆಗಳಲ್ಲಿ ಒಳಗೊಂಡಿರುವ ಪ್ರಮುಖ ದೋಷಗಳು ವಾತ ಮತ್ತು ಕಫ. ಕಲುಷಿತ ವಾತವು ಶ್ವಾಸಕೋಶದಲ್ಲಿನ ಅಸ್ತವ್ಯಸ್ತ ಕಫ ದೋಷದೊಂದಿಗೆ ಸೇರಿಕೊಂಡು ಉಸಿರಾಟದ ಮಾರ್ಗದಲ್ಲಿ ಅಡಚಣೆಯನ್ನು ಉಂಟುಮಾಡುತ್ತದೆ. ಇದು ಬ್ರಾಂಕೈಟಿಸ್‌ಗೆ ಕಾರಣವಾಗುತ್ತದೆ. ಶತಾವರಿಯು ವಾತ-ಕಫವನ್ನು ಸಮತೋಲನಗೊಳಿಸಲು ಮತ್ತು ಉಸಿರಾಟದ ಮಾರ್ಗದಲ್ಲಿನ ಅಡಚಣೆಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ.
- ಕೆಮ್ಮು ನಿವಾರಕವಾಗಿ ಕೆಲಸ ಮಾಡುತ್ತದೆ ಮತ್ತು ಉಸಿರಾಟದ ಪ್ರದೇಶದ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ.
- ಶತಾವರಿ ತೈಲವನ್ನು ವಾತ ಹಾಗೂ ಪಿತ್ತ ದೋಷ ಅಧಿಕವಿರುವ ವ್ಯಕ್ತಿಗಳು ಇದರ ಅಭ್ಯಂಗದಿಂದ ಲಾಭಪಡೆದುಕೊಳ್ಳಬಹುದು.
- ಒತ್ತಡ, ಆತಂಕ ಮತ್ತು ಖಿನ್ನತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ.
- ಮೂತ್ರವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ, ಮೂತ್ರಪಿಂಡದ ಕಲ್ಲುಗಳನ್ನು ತಡೆಯಲು ಸಹಾಯ ಮಾಡುತ್ತದೆ.
- ಶತಾವರಿ ಪುಡಿಯ ಪೇಸ್ಟ್ ಅನ್ನು ಹಾಲು ಅಥವಾ ಜೇನುತುಪ್ಪದೊಂದಿಗೆ ಚರ್ಮದ ಮೇಲೆ ಹಚ್ಚುವುದರಿಂದ ಸುಕ್ಕುಗಳನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ.
- ತೆಂಗಿನ ಎಣ್ಣೆಯೊಂದಿಗೆ ಹಚ್ಚಿದಾಗ ಗಾಯ ಗುಣವಾಗುವುದನ್ನು ಉತ್ತೇಜಿಸಲು ಸಹ ಇದು ಸಹಾಯ ಮಾಡುತ್ತದೆ.
- ಬುದ್ಧಿಮಾಂದ್ಯತೆಯ ನಿರ್ವಹಣೆಯಲ್ಲಿ ಶತಾವರಿ ಪ್ರಯೋಜನಕಾರಿಯಾಗಬಹುದು. ಇದು ನರಗಳ ಟಾನಿಕ್ ಆಗಿದೆ.

## ಆರೋಗ್ಯ ಭಾಗ್ಯ

- ಅರ್ಧ ಚಮಚ ಶತಾವರಿ ಪುಡಿಯನ್ನು ಒಂದು ಲೋಟ ನೀರಿಗೆ ಬೆರೆಸಿ ಮಲಗುವ ಮುನ್ನ ಸೇವಿಸಿದರೆ ರಕ್ತದಲ್ಲಿನ ಸಕ್ಕರೆಮಟ್ಟ ನಿಯಂತ್ರಣದಲ್ಲಿರುತ್ತದೆ.. ಇದಲ್ಲದೇ ಇದನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಬೆಚ್ಚಗಿನ ನೀರು ಅಥವಾ ಹಾಲಿನೊಂದಿಗೆ ಕುಡಿಯಬಹುದು. ಇಲ್ಲವಾದರೆ ಕಷಾಯ ಮಾಡಿ ಕುಡಿಯಬಹುದು.
- ಶತಾವರಿಯು ರಸಾಯನ ಅಂದರೆ ಇದು ನಮ್ಮ ದೇಹಕ್ಕೆ ಉತ್ತಮವಾದ ಟಾನಿಕ್. ಎಲ್ಲಾ ಧಾತುಗಳನ್ನು ಪೋಷಿಸುತ್ತದೆ. ಆಯುಷ್ಯವನ್ನು ವೃದ್ಧಿಸುತ್ತದೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
- ಶತಾವರಿ ಅತಿಸಾರಕ್ಕೆ ಚಿಕಿತ್ಸೆ ನೀಡಲು ಬಹಳ ಹಿಂದಿನಿಂದಲೂ ಬಳಸಲ್ಪಡುವ ಒಂದು ಪರಿಹಾರವಾಗಿದೆ.
- ಶತಾವರಿಯ ಮೂತ್ರವರ್ಧಕ ಗುಣಲಕ್ಷಣಗಳಿಂದಾಗಿ, ಇದು ಮೂತ್ರಪಿಂಡದ ಕಲ್ಲುಗಳನ್ನು ನಿವಾರಿಸುವಲ್ಲಿ ಉಪಯುಕ್ತವೆಂದು ಸಾಬೀತುಪಡಿಸುತ್ತದೆ.
- ಶತಾವರಿ ರೇಸ್‌ಮೋಸಸ್ ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಹೃದಯರಕ್ತನಾಳದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುವ ಉತ್ತಮ ಕೊಲೆಸ್ಟ್ರಾಲ್ ಉತ್ಪಾದನೆಯನ್ನು ಉತ್ತೇಜಿಸುತ್ತದೆ



**ಶತಾವರಿಯನ್ನು ಬಳಸುವುವ ಬಗೆ:**
- ಶತಾವರಿ ಪುಡಿ, ಕ್ಯಾಪ್ಸುಲ್‌ಗಳು ಮತ್ತು ದ್ರವ ಸಾರ ಸೇರಿದಂತೆ ವಿವಿಧ ರೂಪಗಳಲ್ಲಿ ಲಭ್ಯವಿದೆ. ನಿಮ್ಮ ದೈನಂದಿನ ದಿನಚರಿಯಲ್ಲಿ



ಅದನ್ನು ಹೇಗೆ ಸೇರಿಸುವುದು ಎಂಬುದು ಇಲ್ಲಿದೆ:
- ಶತಾವರಿ ಪೌಡರ್: 1-2 ಟೀ ಚಮಚ ಶತಾವರಿ ಪುಡಿಯನ್ನು ಬೆಚ್ಚಗಿನ ಹಾಲು, ನೀರು ಅಥವಾ ಜೇನುತುಪ್ಪದೊಂದಿಗೆ ಮಿಶ್ರಣ ಮಾಡಿ. ಇದನ್ನು ದಿನಕ್ಕೆ ಒಂದು ಅಥವಾ ಎರಡು ಬಾರಿ ಸೇವಿಸಿ.
- ಶತಾವರಿ ಕ್ಯಾಪ್ಸುಲ್‌ಗಳು: ಪ್ಯಾಕೇಜಿಂಗ್‌ನಲ್ಲಿ ಒದಗಿಸಲಾದ ಡೋಸೇಜ್ ಸೂಚನೆಗಳನ್ನು ಅನುಸರಿಸಿ. ಸಾಮಾನ್ಯವಾಗಿ, ದಿನಕ್ಕೆ ಎರಡು ಬಾರಿ 1-2 ಕ್ಯಾಪ್ಸುಲ್ಗಳನ್ನು ಶಿಫಾರಸು ಮಾಡಲಾಗುತ್ತದೆ.
- ಶತಾವರಿ ದ್ರವ ಸಾರ: ದ್ರವದ ಸಾರದ ಕೆಲವು ಹನಿಗಳನ್ನು ನೀರಿಗೆ ಸೇರಿಸಿ ಮತ್ತು ನಿರ್ದೇಶಿಸಿದಂತೆ ಸೇವಿಸುವುದು.

**ಮುನ್ನೆಚ್ಚರಿಕೆ:**
- *ದುರ್ಬಲ ಜೀರ್ಣಕ್ರಿಯೆ ಇರುವವರು ಇದನ್ನು ಸೇವಿಸುವುದನ್ನು ತಪ್ಪಿಸಬೇಕು, ಏಕೆಂದರೆ ಇದು ಜೀರ್ಣಿಸಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು.
- ಶತಾವರಿ ಮೂತ್ರಪಿಂಡದ ಕಾರ್ಯನಿರ್ವಹಣೆಯನ್ನು ದುರ್ಬಲಗೊಳಿಸಬಹುದು. ಆದ್ದರಿಂದ ನಿಮಗೆ ಮೂತ್ರಪಿಂಡ ಸಂಬಂಧಿತ ಅಸ್ವಸ್ಥತೆ ಇದ್ದರೆ ಶತಾವರಿ ತೆಗೆದುಕೊಳ್ಳುವ ಮೊದಲು ವೈದ್ಯರನ್ನು ಸಂಪರ್ಕಿಸಲು ಸಾಮಾನ್ಯವಾಗಿ ಸಲಹೆ ನೀಡಲಾಗುತ್ತದೆ.



ಸೌಮ್ಯಸನತ್
ಶಿಕ್ಷಕರು

**ಗಮನಿಸಬೇಕಾದ ಅಂಶಗಳು:**
ಯಾವುದೇ ಹೊಸ ಗಿಡಮೂಲಿಕೆ ಪೂರಕವನ್ನು ಪ್ರಾರಂಭಿಸುವ ಮೊದಲು ಅರ್ಹ ಆಯುರ್ವೇದ ವೈದ್ಯರು ಅಥವಾ ಆರೋಗ್ಯ ವೃತ್ತಿಪರರನ್ನು ಸಂಪರ್ಕಿಸುವುದು ಅತ್ಯಗತ್ಯ,

ಏಕೆಂದರೆ ಅವರು ನಿಮ್ಮ ನಿರ್ದಿಷ್ಟ ಆರೋಗ್ಯ ಅಗತ್ಯತೆಗಳು ಮತ್ತು ಕಾಳಜಿಗಳ ಆಧಾರದ ಮೇಲೆ ವೈಯಕ್ತಿಕ ಮಾರ್ಗದರ್ಶನವನ್ನು ನೀಡಬಹುದು.

# ತಾಯಿ ಋಣವನ್ನೂ ಮಂಕಾಗಿಸುವ ಅಂದಾಭಿಮಾನದ ಪೊರೆ....!

ಚಾಲೆಂಜಿಂಗ್ ಸ್ಟಾರ್ ದರ್ಶನ್ ರವರ ಹೊಸ ಸಿನಿಮಾ "ಡೆವಿಲ್" ರಾಜ್ಯಾದ್ಯಂತ ಬಿಡುಗಡೆಯಾಗಿ ಅವರ ಅಭಿಮಾನಿಗಳಲ್ಲಿ ಸಾಕಷ್ಟು ಕ್ರೇಜ್ ಸೃಷ್ಟಿಸಿದೆ. ಅವರೀಗ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ಜೈಲಿನಲ್ಲಿದ್ದಾರೆ. ಇಂತಹ ಒಂದು ವೈರುಧ್ಯದ ಸಂದರ್ಭದಲ್ಲಿ ತಮ್ಮ ನೆಚ್ಚಿನ ನಾಯಕನಟನ ಡೆವಿಲ್ ಚಿತ್ರಕ್ಕಿರುವ ಕ್ರೇಝು ಅಭಿಮಾನಿಗಳಲ್ಲಿ ಸಹಜವಾಗಿ ದುಪ್ಪಟ್ಟಾಗಿದೆ. ದರ್ಶನ್ ರವರ ವೈಯಕ್ತಿಕ ತಪರಾಕಿಗಳನ್ನು ಪಕ್ಕಕ್ಕಿಟ್ಟು ನೋಡುವುದಾದರೆ ಇಂದಿನ ನೆಟ್ ಮತ್ತು ಸೋಷಿಯಲ್ ಮೀಡಿಯಾ ಜ಼ಮಾನದಲ್ಲೂ ಥಿಯೇಟರ್ ಗಳಿಗೆ ಜನರನ್ನು ಎಳೆದುಕೊಂಡು ಬರುವ ಶಕ್ತಿ ಇರುವ ಕೆಲವೇ ಮಾಸ್ ಸ್ಟಾರ್ ಗಳಲ್ಲಿ ದರ್ಶನ್ ಕೂಡಾ ಒಬ್ಬರು ಎಂಬುದರಲ್ಲಿ ಡೌಟೇ ಇಲ್ಲ. ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ಜೈಲು ಸೇರಿದ್ದರೂ, ಅವರ ಅಭಿಮಾನಿಗಳಲ್ಲಿ ಅವರ ಮೇಲಿರುವ ಅಭಿಮಾನ ಎಳ್ಳಷ್ಟೂ ಕಡಿಮೆಯಾಗಿಲ್ಲ . ಕನ್ನಡದಲ್ಲಿ ಇಂದಿಗೂ ಅಧಿಕ ಅಭಿಮಾನಿಗಳನ್ನು ಹೊಂದಿರುವ ಜನಪ್ರಿಯ ನಟ ದರ್ಶನ್.

ಸಿನಿಮಾನಟರ ಮೇಲಿನ ಅಭಿಮಾನವೆಂಬುದು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ವ್ಯಕ್ತವಾಗುವ ನಿಷ್ಕಳಂಕ ಪ್ರೀತಿಯಿದ್ದಂತೆ. ಅಭಿಮಾನದ ವಿವಿಧ ಆಯಾಮಗಳ ಕುರಿತಂತೆ ಈಗಾಗಲೇ ಸಾಕಷ್ಟು ಬರೆದಿದ್ದರೂ ಇಂದಿನ ಒಬ್ಬ ಅಭಿಮಾನಿಯ ಮಾತುಗಳು ಈ ಬಗ್ಗೆ ಪುನಃ ಎರಡು ಸಾಲುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಂತೆ ಮಾಡಿವೆ.

ತಮ್ಮ ನೆಚ್ಚಿನ ನಟ ದರ್ಶನ್ ಮೇಲೆ ಅವರ ಅಭಿಮಾನಿಗಳು ತೋರಿಸುವ ಅಭಿಮಾನದ ಹವಾ, ಕ್ರೇಝು ಅಥವಾ ಆರಾಧನೆಯೆಂಬುವು ಇತರೆ ನಟರ ಅಭಿಮಾನಿಗಳಿಗಿಂತ ಸದಾ ಸ್ವಲ್ಪ ಡಿಫರೆಂಟು. ! ನಿನ್ನೆ ಡೆವಿಲ್ ಸಿನಿಮಾ ಬಿಡುಗಡೆಯ ಸಂದರ್ಭದಲ್ಲಿ ಇಲ್ಲೊಬ್ಬ ದರ್ಶನ್ ಅಭಿಮಾನಿ ಮೀಡಿಯಾಗಳ ಕ್ಯಾಮೆರಾ ಮುಂದೆ ಮಾತನಾಡುತ್ತಾ ತನ್ನ ಅಭಿಮಾನ ತೋರಿರುವ ರೀತಿ ನೋಡಿದಲ್ಲಿ ನಿಜಕ್ಕೂ ದಂಗಾಗಿ ಹೋಗುವುದೊಂದು ಬಾಕಿ !

ಈ ಅಭಿಮಾನಿ ಕ್ಯಾಮೆರಾ ಮುಂದೆ ಹೀಗೆ ಹೇಳುತ್ತಾನೆ. " ಜನ್ಮಕೊಟ್ಟ ತಂದೆ ತಾಯಿ ಕಳೆದುಕೊಂಡರೂ ಇಷ್ಟು ದುಃಖ ಆಗ್ತಾ ಇರ್ಲಿಲ್ಲ. ದರ್ಶನ್ ಜೈಲಿನಲ್ಲಿರುವುದಕ್ಕೆ ಅಷ್ಟೊಂದು ದುಃಖ ಆಗ್ತಾ ಇದೆ. ನಾವು ತಾಯಿ ಋಣ ತೀರಿಸಬಹುದು ಆದರೆ ದರ್ಶನ್ ರ ಋಣ ತೀರಿಸಲಾಗಲ್ಲ "...ಹೀಗೆ ಹೇಳುತ್ತಾ ಹೋಗುವ ಆತ ತಾನೇನು ಮಾತನಾಡುತ್ತಿದ್ದೇನೆಂಬ ಬಗ್ಗೆ ಗಮನವೇ ಇಲ್ಲದಂತೆ ಅಭಿಮಾನದ ಅಮಲಿನಲ್ಲಿ ತೇಲಿ ಉತ್ತುಂಗ ತಲುಪಿದ್ದ.!



ಇದಕ್ಕೆ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಕಾಮೆಂಟುಗಳು ಬಂದು, ತಂದೆ ತಾಯಿಯನ್ನು ಕಡೆಗಣಿಸಿ ಮಾತನಾಡಿದ ಅವನನ್ನು ಎಲ್ಲರೂ ಅವರವರದ್ದೇ ಆದ ಶೈಲಿಯಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಅಭಿಮಾನ, ಅತೀ ಅಭಿಮಾನ, ಅಂಧಾಭಿಮಾನ ಹಾಗೂ ದುರಭಿಮಾನಗಳ ನಾನಾ ಸ್ವರೂಪಗಳ ಬಗ್ಗೆ ಸಾಕಷ್ಟು ನೋಡಿದ್ದೇವೆ, ಕೇಳಿದ್ದೇವೆ, ತಿಳಿದಿದ್ದೇವೆ ಹಾಗೂ ಬರೆದೂ ಇದ್ದೇವೆ. ಆದರೆ ಈ ಅಭಿಮಾನಿ ವ್ಯಕ್ತಪಡಿಸಿರುವ ಭಾವನೆಗಳನ್ನು ಈ ಯಾವ ರೀತಿಯ ಅಭಿಮಾನದ ಗುಂಪಿಗೂ ಸೇರಿಸಲು ಬಾರದೇನೋ.! ಅದೇ ಒಂಥರಾ ವಿಭಿನ್ನ .! ಏಕೆಂದರೆ ಇದು ಅಂದಾಭಿಮಾನ, ದುರಭಿಮಾನ ಅತಿಯಾದ ಅಭಿಮಾನಕ್ಕಿಂತಲೂ ಹೆಚ್ಚಿಗೆ ಅತ್ಯಂತ ಅತಿರೇಕದಭಿಮಾನದ ಪರಮಾವಧಿ ಮಟ್ಟ ಮುಟ್ಟಿದೆ. ಒಬ್ಬ ಚಿತ್ರನಟನ ಮೇಲಿನ ಉತ್ಕಟಾಭಿಮಾನದ ಹೆಸರಿನಲ್ಲಿ ತನ್ನನ್ನು ಹೊತ್ತು ಹೆತ್ತು ಸಾಕಿ ಸಲಹಿದ ತಂದೆ ತಾಯಿಯನ್ನೇ ಕಡೆಗಣಿಸಿ, ತೀರ ಹಗುರವಾಗಿ, ಅದೂ ಸಾರ್ವಜನಿಕವಾಗಿ ಮಾತನಾಡುವ ಹಂತಕ್ಕೆ ಈತ ತಲುಪಿರುವುದು ಮುಂದಿನ ಸಮಾಜದ ಆತಂಕಕಾರಿ ಸ್ವರೂಪಕ್ಕೆ ಸಾಕ್ಷಿಯೆಂಬಂತಿದೆ.

"ಜನ್ಮಕೊಟ್ಟ ತಂದೆ ತಾಯಿಯನ್ನು ಕಳೆದುಕೊಂಡರೂ ಇಷ್ಟು ದುಃಖವಾಗ್ತಾ ಇರಲಿಲ್ಲ , ದರ್ಶನ್ ಜೈಲಿನಲ್ಲಿರುವುದು ಅದಕ್ಕಿಂತ ದುಃಖವಾಗ್ತಿದೆ " ಎನ್ನುವ ಈತನ ಮಾತಿನಲ್ಲಿ ತನ್ನ ನೆಚ್ಚಿನ ನಟನ ಮೇಲಿನ ಅಭಿಮಾನದ ಪರಾಕಾಷ್ಠೆ ಪ್ರಕಟವಾಗಿದೆಯೋ, ಟೀವಿ ಕ್ಯಾಮೆರಾ ಮುಂದೆ ಬಿಲ್ಡಪ್ ಗಾಗಿ ,ಪ್ರಚಾರಕ್ಕಾಗಿ ಹೀಗೆ ಮಾತನಾಡುತ್ತಾರೋ ಅಥವಾ ಜನ್ಮಕೊಟ್ಟವರೆಂದರೆ ಈತನ ಪಾಲಿಗೆ ಅಷ್ಟು ಕೇವಲವೋ ಅರ್ಥವಾಗುತ್ತಿಲ್ಲ.

ಅಷ್ಟೇ ಅಲ್ಲದೇ " ತಾಯಿ ಋಣ ತೀರಿಸಬಹುದು ಆದರೆ ದರ್ಶನ್ ಋಣ ತೀರಿಸಲಾಗೋಲ್ಲ " ಎಂದು ಈತ ಹೇಳಿದ್ದನ್ನು ಬಹುಶಃ ದರ್ಶನ್ ಕೇಳಿದ್ದರೂ ಈತನಿಗೆ ಬಯ್ದು ಬುದ್ದಿ ಹೇಳುತ್ತಿದ್ದರೇನೋ ! ತಾಯಿ ಋಣವೆಂಬುದರ ಅರ್ಥ– ಮಹತ್ವ ಈತನಿಗೆ ಗೊತ್ತಿದ್ದರೆ ಹೀಗೆಲ್ಲಾ ಮಾತನಾಡುತ್ತಿರಲಿಲ್ಲ.

" ನಿಮಗೆ ದರ್ಶನ್ ಅಂಥಾದ್ದೇನು ಮಾಡಿದ್ದಾರೆ " ಎಂಬ ಪತ್ರಕರ್ತನ ಪ್ರಶ್ನೆಗೆ ಈ ಅಭಿಮಾನಿಯಲ್ಲಿ ಸ್ಪಷ್ಟ ಉತ್ತರವಿರಲಿಲ್ಲ.! ಯಾರದೇ ಮೇಲಿನ ಅತಿರೇಕದ ಅಭಿಮಾನವೆಂಬುದಕ್ಕೆ ಯಾವುದೇ ತಾತ್ವಿಕ ತಳಹದಿಯಿರಲಾರದೆಂಬುದಕ್ಕೆ ಈತನ ಮಾತುಗಳೇ ಸಾಕ್ಷಿ. ಸಿನಿಮಾ ನಟರ ಮೇಲಿನ ಅಭಿಮಾನಕ್ಕೆ ದಶಕಗಳ ಇತಿಹಾಸವೇ ಇದೆ. ಅವರವರ ನೆಚ್ಚಿನ ನಟರನ್ನು ಹೊತ್ತು ಮೆರೆಸುವುದೇ ಇಂಥಾ ಅಮಾಯಕ ಅಭಿಮಾನಿಗಳು. ಅಭಿಮಾನಿಗಳಿಲ್ಲದಿದ್ದರೆ ನಟರು ಸೂಪರ್ ಸ್ಟಾರ್ ಗಳಾಗಿ ಬಿಲ್ಡಪ್ ತೆಗೆದುಕೊಳ್ಳುತ್ತಿರಲಿಲ್ಲ, ದುಡ್ಡೂ ಮಾಡುತ್ತಿರಲಿಲ್ಲ.

ಅಭಿಮಾನಿಗಳ ಈ ಅಗಾಧ ಶಕ್ತಿ, ಮಹತ್ವ ಹಾಗೂ ನಿಷ್ಕಳಂಕ ಅಭಿಮಾನ ನೋಡಿಯೇ ಡಾ. ರಾಜ್ ಕುಮಾರ್ ರವರು ಅಭಿಮಾನಿಗಳನ್ನು ದೇವರಿಗೆ ಹೋಲಿಸಿದ್ದು. ಒಟ್ಟಾರೆ ತಮ್ಮ ಅಭಿಮಾನದ ನಟನ ಸಿನಿಮಾ ಹಿಟ್ ಆದರೆ ದುಡ್ಡು ಜೇಬಿಗಿಳಿಸುವ ನಟ – ನಿರ್ಮಾಪಕರಿಗಿಂತಲೂ ದುಡ್ಡು ಕೊಟ್ಟು ಸಿನಿಮಾ ನೋಡಿ ಜೈಕಾರ ಹಾಕುವ ಈ ಅಭಿಮಾನಿಗಳಿಗೆ ಹೆಚ್ಚು ಖುಷಿ ! ತಮ್ಮ ನಾಯಕ ನಟ ಇತರೆ ಯಾವ ನಟನಿಗಿಂತಲೂ ಕಡಿಮೆ ಇರಬಾರದೆಂಬ ವಿಚಿತ್ರ ವ್ಯಾಮೋಹಾಭಿಮಾನ ಇವರ ಪ್ರತೀ ವರ್ತನೆಯಲ್ಲೂ ಬಿತ್ತರವಾಗುತ್ತಲೇ ಇರುತ್ತದೆ. ಈ ಎಲ್ಲಾ ತರಹದ ಅಭಿಮಾನವನ್ನೂ ನೋಡಿದ್ದಾಗಿದೆ.

ಆದರೆ, ಅಭಿಮಾನದ ಹೆಸರಿನಲ್ಲಿ ಜನ್ಮಕೊಟ್ಟವರಿಗಿಂತ ಸಿನಿಮಾದಲ್ಲಿ ದುಡ್ಡು ಹೆಸರು ಮತ್ತು ತನ್ನ ಭವಿಷ್ಯದ ಬಿಲ್ಡಪ್ ಗಾಗಿ ನಟನೆ ಮಾಡುವ ಒಬ್ಬ ನಾಯಕನಟ ಹೇಗೆ ದೊಡ್ಡವನಾಗುತ್ತಾನೆಂಬ ಈ ಅತಿರೇಕದ ಸಿದ್ದಾಂತ ಮಾತ್ರ ನಿಜಕ್ಕೂ ನಮಗೆಲ್ಲಾ ಹೊಸದು. ಇದು ನಮ್ಮ ಯುವ ಸಮೂಹ ಅಭಿಮಾನದ ಸುಕೃತ ವ್ಯಾಖ್ಯಾನವನ್ನು ಹೀಗೆ ವಿಕೃತಗೊಳಿಸುತ್ತಿರುವ ನವೀನ ಬಗೆಯೋ ಅಥವಾ ಯುವ ಸಮೂಹದ ಯೋಚನಾ ಲಹರಿ ಬೌದ್ಧಿಕವಾಗಿ ಹಳ್ಳ ಹಿಡಿಯುತ್ತಿರುವ ಸಂಕೇತವೋ ಎಂದು ತಿಳಿಯದೇ ಆತಂಕವಾಗುತ್ತಿದೆ. ಅಭಿಮಾನ ಅತಿಯಾಗಿ ನಟರ ವೈಯಕ್ತಿಕ ಬದುಕಿನತ್ತ ಇಣುಕಿ ಭಾವಾವೇಶಕ್ಕೊಳಗಾಗಿದ್ದರಿಂದಲೇ ಚಿತ್ರದುರ್ಗದ ರೇಣುಕಾಸ್ವಾಮಿ ತಾನೂ ದುರ್ಗತಿ ತಂದುಕೊಂಡಿದ್ದಲ್ಲದೇ ತಾನು ಅಭಿಮಾನಿಸುವ ನಾಯಕ ನಟನಿಗೂ ಸಂಕಷ್ಟ ತಂದಿತ್ತ ಕರಾಳ ಘಟನೆ ನಡೆದಿದ್ದು. ಕೊನೇಪಕ್ಷ ಈ ಪ್ರಕರಣ ಅಭಿಮಾನದ ಅತಿರೇಕಕ್ಕೆ ಒಂದು ಜ್ವಲಂತ ಉದಾಹರಣೆಯಾಗಿ ಅತಿರೇಕ ಮಾಡುವವರಲ್ಲಿ ಜಾಗ್ರತೆ ಮೂಡಿಸಬೇಕಿತ್ತು. ಆದರೆ ನಿಜ ಬದುಕಿನಲ್ಲಿ ಜನ್ಮಕೊಟ್ಟವರಿಗಿಂತ, ಅನ್ನ ಹಾಕಿದವರಿಗಿಂತ ತೆರೆಯ ಮೇಲೆ ನಟಿಸುವವರನ್ನೇ ದೇವರಾಗಿ ನೋಡುವ, ಅವರೇ ಸರ್ವಸ್ವವೆಂದು ಭ್ರಮಿಸುವ ಇಂದಿನ ಅಭಿಮಾನಿಗಳೆನಿಸಿಕೊಂಡ ಕೆಲವರ ಮಾತುಗಳು ಕೇವಲ ಅತಿರೇಕದ ಅಥವಾ ಹುಚ್ಚಾಟದ ಅಭಿಮಾನಕ್ಕೆ ಉದಾಹರಣೆ ಮಾತ್ರವಲ್ಲ ಬದಲಿಗೆ ನಮ್ಮ ಯುವ ಸಮೂಹ ತುಳಿಯುತ್ತಿರುವ ತಪ್ಪು ಹೆಜ್ಜೆಗಳೂ ಹೌದೆಂದು ಅವರಿಗೆ ಅರಿವು ಮೂಡಿಸುವವರು ಯಾರು..?

* ಮರೆಯುವ ಮುನ್ನ *

ಒಂಭತ್ತು ತಿಂಗಳು ಜತನದಿಂದ ಹೊತ್ತು ಹೆತ್ತ ತಾಯಿಯನ್ನು ಅಥವಾ ಬದುಕಿನ ಎಂಥಾ ಕಷ್ಟವನ್ನಾದರೂ ಎದುರಿಸಿ ಮಕ್ಕಳನ್ನು ಸಾಕಿ ಬೆಳೆಸಿ ದೊಡ್ಡವರನ್ನಾಗಿ ಮಾಡಿದ ತಂದೆಯನ್ನು ಕಳೆದುಕೊಂಡರೆ ಇವರಿಗೆ ಸಂಕಟವಾಗೋಲ್ಲ. ಆದರೆ ಇವರ ನಿಜ ಬದುಕಿಗೆ ಪ್ರಯೋಜನಕ್ಕೆ ಬಾರದ, ತನ್ನ ನಟನೆಯಿಂದ ಕೇವಲ ಮಾನಸಿಕ ಆನಂದ ಕೊಡಬಲ್ಲ ಒಬ್ಬ ಸಿನಿಮಾ ನಟನಿಗೆ ಕಷ್ಟ ಬಂದಾಗ ಮುಮ್ಮಲ ಮರುಗಿ ಸಂಕಟ ಪಡುತ್ತಾರೆ. ನೆಚ್ಚಿನ ನಟನ ಸಂಕಟಕ್ಕೆ ಕಣ್ಣೀರಿಡುವುದು ತಪ್ಪಲ್ಲ ಆದರೆ ಅದನ್ನು ತಂದೆ ತಾಯಿಯರ ತೂಕಕ್ಕೆ ಹೋಲಿಸಿ ಮಾತನಾಡುವುದಿದೆಯಲ್ಲಾ ಅದು ಶುದ್ಧ ತಪ್ಪು. ವ್ಯಂಗ್ಯವೇನು ಗೊತ್ತಾ..! ನಿಜಾರ್ಥದಲ್ಲಿ ಅನ್ನ ಹಾಕಿದವರು, ಸಾಕಿ ಸಲಹಿದವರು ಧಣಿ – ಯಜಮಾನ ಆಗದೇ, ಉದ್ಯೋಗ ಕೊಟ್ಟವರು ಬಾಸ್ ಆಗದೇ, ಅಕ್ಷರ ಕಲಿಸದವ ಗುರು ಆಗದೇ, ರಾಜ್ಯವನ್ನಾಳಿದವ ಚಕ್ರವರ್ತಿ ಆಗದೇ....ಈ ಏನೊಂದಕ್ಕೂ ಸ್ಪಂದಿಸದ ತೆರೆಯ ಮೇಲಿನ ಸಿನಿಮಾ ನಟರನ್ನು ಧಣಿ, ಬಾಸು, ಗುರು, ಯಜಮಾನ, ಚಕ್ರವರ್ತಿ, ಕಿಂಗು ಕ್ವೀನು....ಎಲ್ಲವನ್ನೂ ಆಗಿ ಮೆರೆಸುವ ಅಭಿಮಾನಿಗಳು ಒಂದು ಸರಳ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಅದೆಂದರೆ ನಿಮ್ಮನಿಮ್ಮ ನೆಚ್ಚಿನ ನಟರನ್ನು ನೀವು ಆರಾಧಿಸಿ, ಅಭಿಮಾನಿಸಿ , ಕೊಂಡಾಡಿ, ಗೌರವಿಸಿ, ಮೆಚ್ಚಿಕೊಳ್ಳಿ ಅಥವಾ ಸ್ಟಾರ್ ಗಳೆಂದು ಮೆರವಣಿಗೆ ಮಾಡಿ. ಅದು ನಿಮ್ಮ ಅಭಿಮಾನದ ಪ್ರತೀಕ . ಅವರ ಒಳ್ಳೆಯ ಸಿನಿಮಾಗಳನ್ನು ನೋಡಿ ಖುಷಿ ಪಡಿ ಅಥವಾ ಅದರಲ್ಲಿ ಏನಾದರೂ ಒಳ್ಳೆಯ ಅಂಶವಿದ್ದರೆ ನಿಮ್ಮ ಜೀವನಕ್ಕೆ ಅಳವಡಿಸಿಕೊಳ್ಳಿ ತಪ್ಪಲ್ಲ. ಆದರೆ ಅವರನ್ನು ತಂದೆ ತಾಯಿಗಿಂತಲೂ ಹೆಚ್ಚಿನ ಸ್ಥಾನದಲ್ಲಿಟ್ಟು ನೋಡುವ ಕಡು ಮೂರ್ಖತನ ಮಾತ್ರ ಬೇಡ. ಅದು ಕೇವಲ ನಿಮಗೆ ಜನ್ಮಕೊಟ್ಟವರಿಗೆ ಮಾಡುವ ಅಪಮಾನ ಮಾತ್ರವಲ್ಲ, ನಿಮ್ಮ ನೆಚ್ಚಿನ ನಟನಿಗೂ ಕೆಟ್ಟ ಹೆಸರು ತಂದಂತೆ. ಇವೆಲ್ಲಕ್ಕಿಂತ ಮಿಗಿಲಾಗಿ ಅಭಿಮಾನದ ಹೆಸರಿನ ಇಂಥಾ ವಿಚಿತ್ರ ಮನೋಭಾವ ಹಾಗೂ ಅತಿರೇಕದ ವರ್ತನೆ ಒಂದು ಆರೋಗ್ಯಕರ ಸಮಾಜವನ್ನು ದಾರಿ ತಪ್ಪಿಸಿದಂತೆ ಆಗಬಲ್ಲದೆಂಬ ಕನಿಷ್ಠ ಎಚ್ಚರವಿರಲಿ.

ಈ ಮಾತು ಕೇವಲ ದರ್ಶನ್ ಅಭಿಮಾನಿಗಳಿಗೆ ಮಾತ್ರವಲ್ಲ, ಅಭಿಮಾನದ ಹೆಸರಿನಲ್ಲಿ ಅತಿರೇಕದಿಂದ ವರ್ತಿಸುವ ಎಲ್ಲಾ ಸಿನಿಮಾ ನಟರ , ರಾಜಕೀಯ ನಾಯಕರ ಅಭಿಮಾನಿಗಳಿಗೂ ಸಮಾನ ಅನ್ವಯ.



ಹಿರಿಯೂರು ಪ್ರಕಾಶ್

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,